ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 12 ಮಾರ್ಚ್ 23, 1986 ಬೆಲೆ 60 ಪೈಸೆ

ಕುಸಿದು ಬೀಳುತ್ತಿರುವ ಕೇಂದ್ರ ಆಡಳಿತೆ ದೇಶಕ್ಕೆ ಗಂಡಾಂತರ

ರಾಮ ಸ್ವರೂಪ ಗೂಢಚರ್ಯೆ, ತಿಹಾರ್ ಜೈಲಿನಿಂದ ಶೋಭರಾಜ್‌ನ ಪರಾರಿ, ಪಂಜಾಬಿನಲ್ಲಿ ನಿರಂತರ ಹತ್ಯಾಕಾಂಡ, ಕರ್ಫ್ಯೂ, ದೇಶದ ನಾನಾ ಕಡೆಗಳಲ್ಲಿ ಬ್ಯಾಂಕ್- ಮನೆಗಳ ದರೋಡೆ, ನಿರಪರಾಧಿಗಳ ಹತ್ಯೆ, ಕಾಶ್ಮೀರದಲ್ಲಿ ಮತೀಯ, ಪಾಕಿಸ್ತಾನಿ ಹಾಗೂ ವಿದೇಶಿ ಏಜಂಟರ ಬಹಿರಂಗ ಛಿದ್ರಕಾರಿ ಚಟುವಟಿಕೆ, ಅಸ್ಸಾಂನಲ್ಲಿ ಮತ್ತೆ ದೇಶಿ-ವಿದೇಶಿ ಸಮಸ್ಯೆ, ಸಿ ಪಿ ಐ (ಎಂ)-ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಅತ್ಯಾಚಾರ, ದಬ್ಬಾಳಿಕೆ, ಕೇಂದ್ರ ಸರಕಾರದ ಕರಿಪಟ್ಟಿಯಲ್ಲಿ ಸೇರಿಸಲ್ಪಟ್ಟ ಕುವೈತ್ ರಾಷ್ಟ್ರೀಯರ ಕೇರಳ ಸಂದರ್ಶನ, ಅವರಿಗೆ ಮುಸ್ಲಿಂ ಲೀಗಿನ ಆದರದ ಸ್ವಾಗತ, ಮಧ್ಯ ಪ್ರದೇಶ ಬಿಹಾರಗಳಲ್ಲಿ ಹಾಗೆಯೇ ಆಂಧ್ರ ಪ್ರದೇಶದಲ್ಲಿ ಹರಿಜನ ಗಿರಿಜನರ ಮೇಲೆ, ಹಿಂದುಳಿದವರ ಮೇಲೆ ಅತ್ಯಾಚಾರ, ಹೈದರಾಬಾದಿನಲ್ಲಿ ಹಾಗೆಯೇ ಉತ್ತರ ಪ್ರದೇಶದ ಶ್ರೀರಾಮ ಭೂಮಿ ದೇವಸ್ಥಾನದ ಕುರಿತು ಎದ್ದ ಹಿಂದೂ ಮುಸ್ಲಿಂ ಜನರ ವ್ಯಾಪಕ ದಂಗೆ, ತ್ರಿಪುರಾದಲ್ಲಿ ಕಾಂಗ್ರೆಸ್ ಬೆಂಬಲದಿಂದ ನಡೆಯುತ್ತಿರುವ ಹಿಂಸಾಕೃತ್ಯ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷದವರಿಂದಲೇ ಹಿಂಸಾಚಾರ-ಇವುಗಳೆಲ್ಲ ದೇಶದ ಭದ್ರತೆಗೆ ಅಪಾಯಕಾರಿ.

ಇದಕ್ಕೆ ಪೂರಕವಾಗಿ ಕಾಂಗ್ರೆಸ್ ಪಕ್ಷದಲ್ಲಿ ಗುಂಪುಗಾರಿಕೆ, ಆಂತರಿಕ ಜಗಳದಿಂದಾಗಿ ಹಲವಾರು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳ ಬದಲಾವಣೆ ಇವುಗಳಿಂದಾಗಿ ಇಡೀ ದೇಶದ ಆಡಳಿತ ಕುಸಿದು ಬೀಳುವಂತಾಗಿದೆ.

ಪಂಜಾಬಿನ ಖಲಿಸ್ತಾನ ಚಳುವಳಿ, ಅಸ್ಸಾಂನ ವಿದೇಶಿಯರ ಕುರಿತಾದ, ಕಾಶ್ಮೀರದಲ್ಲಿಯ ಚಳುವಳಿಗಳೆಲ್ಲ ಅಮೇರಿಕನ್ ಸಾಮ್ರಾಜ್ಯಶಾಹಿ ಇಡೀ ದೇಶವನ್ನೇ ಅಭದ್ರಗೊಳಿಸುವ ದೃಷ್ಟಿಯಿಂದ ನಡೆಸಿರುವ ಒಳಸಂಚೆಂದು ಸಿಪಿಐ(ಎಂ) ಪ್ರಾರಂಭದಲ್ಲೇ ಎಚ್ಚರಿಸಿತ್ತು. ಇಂದಿರಾಗಾಂಧಿಯವರ ಹತ್ಯೆ, ಅನಂತರದ ದಂಗೆಗಳೆಲ್ಲ ಅವರಿಂದಲೇ ಪ್ರಚೋದಿತವೆಂದೂ ಹೇಳಿತ್ತು. ರಾಜೀವಗಾಂಧಿಯವರು ಅಧಿಕಾರಕ್ಕೆ ಬಂದ ನಂತರ ವಿದೇಶಿ ಕೈವಾಡದ ವಿರುದ್ಧ, ಛಿದ್ರಕಾರಿ ಶಕ್ತಿಗಳನ್ನು ಮುಟ್ಟುಗೋಲು ಹಾಕಲು ಯೋಗ್ಯ ಕ್ರಮ ಕೈಗೊಳ್ಳುತ್ತಾರೆಂದು ಅಪೇಕ್ಷಿಸಿದ್ದೆವು. ಆದರೆ ತಮ್ಮ ಅಧಿಕಾರವನ್ನು ಭದ್ರವಾಗುಳಿಸಲು, ಸಿಪಿಐ(ಎಂ) ಹಾಗೆಯೇ ಇತರ ವಿರೋಧ ಪಕ್ಷಗಳ ವಿರುದ್ಧ ಸುಲಭವಾಗಿ ಎತ್ತಿಕಟ್ಟಲು ಅನುಕೂಲವಾಗುವಂತೆ, ಮತೀಯ,ಜಾತೀಯ ಛಿದ್ರಕಾರಿ ಶಕ್ತಿಗಳಿಗೆಲ್ಲ ಪ್ರತ್ಯಕ್ಷ, ಅಪ್ರತ್ಯಕ್ಷ ರೀತಿಯಿಂದ ಬೆಂಬಲ ನೀಡಿದರು, ನೀಡುತ್ತಿದ್ದಾರೆ. ವಿದೇಶಿ ಶಕ್ತಿಗಳು ಕೂಡ ಇಂಥವರಿಗೆ ಸರ್ವರೀತಿಯಿಂದಲೂ ಸಹಾಯ ಮಾಡುತ್ತಿದ್ದಾರೆಂದು ತಿಳಿದೂ ತಮ್ಮ ಸ್ವಾರ್ಥ ಸಾಧನೆಗೆ ಅವುಗಳನ್ನು ಉಪಯೋಗಿಸುತ್ತಿದ್ದಾರೆ.

"ದೇಶದ ರಕ್ಷಣೆಗೆ ಸಂಬಂಧ ಪಟ್ಟ ದಸ್ತಾವೇಜುಗಳನ್ನು, ಮಾಹಿತಿಗಳನ್ನು ಸಂಗ್ರಹಿಸಲು ಅಮೇರಿಕನ್ ಗೂಢಚರ್ಯೆ ಒಳಸಂಚು ಹೂಡಿದೆ. ಪಶ್ಚಿಮ ಜರ್ಮನಿ, ಫ್ರಾನ್ಸ್, ಇಸ್ರೇಲ್ ಸರಕಾರಗಳು ಈ ಒಳಸಂಚಿನಲ್ಲಿ

[8ನೇ ಪುಟ ನೋಡಿ]

ನೋಡಿ 'ಕಮ್ಯುನಿಸ್ಟ್ ಜಾಥಾ ಹೊರಟಿದೆ'

"ನೋಡಿ ಕಮ್ಯುನಿಸ್ಟ್ ಜಾಥಾ ಹೊರಟಿದೆ. ಅದಿನ್ನು ನಿಲ್ಲುವುದಿಲ್ಲ. ಯಾರೂ ಅದನ್ನು ತಡೆಯಲಾರರು". ಎಂದನಂತೆ ಜಲಂದರ್ ಜಿಲ್ಲೆಯ ಓಕ್‌ಲೌರ್ ಗ್ರಾಮದ ಒಬ್ಬ ಹಣ್ಣು ಮುದುಕ ತನ್ನೂರಿಗೆ ಬರುತ್ತಿದ್ದ ಜಾಥಾವನ್ನು ಕಂಡು. "ಪಂಜಾಬ್ ಒಪ್ಪಂದ ಜ್ಯಾರಿಯಾಗಲಿ" "ಹಿಂದೂ-ಸಿಖ್ ಐಕ್ಯತೆ ಚಿರಾಯುವಾಗಲಿ" "ತೀವ್ರವಾದ ಪ್ರತ್ಯೇಕತಾವಾದಕ್ಕೆ ಧಿಕ್ಕಾರ" "ಹಿಂದೂ ಆಳ್ವಿಕೆ ಬೇಡ-ಬೇಡ ಖಲಿಸ್ತಾನ್ - ಚಿರಾಯುವಾಗಲಿ ಹಿಂದೂಸ್ತಾನ್" ಎಂಬ ಘೋಷಣೆಗಳು ಪಂಜಾಬಿನ ಹಲವು ಸಂಖ್ಯೆ ಹಳ್ಳಿಗಳಲ್ಲಿ ಝೇಂಕರಿಸುತ್ತಿವೆ. ಅಗೋ ನೋಡು ಹಾರಾಡು ಕೆಂಬಾವುಟ, ಬ್ಯಾನರ್ ಹಿಡಿದ, ಹಾರಾಡು ಜನ ಟ್ರಕ್, ಟ್ರ್ಯಾಕ್ಟರ್, ಮೆಟಡೋರ್, ಸೈಕಲ್, ಸ್ಕೂಟರ್, ಸೈಕಲ್ ಮೋಟರ್‌ಗಳಲ್ಲಿ ಮೇಲಿನ ಘೋಷಣೆ ಕೂಗುತ್ತ ಜನರನ್ನು ಆಕರ್ಷಿಸುತ್ತಿದ್ದಾರೆ. ಪ್ರತಿದಿನ ಹಿಂಸಾಚಾರಕ್ಕೆ, ಲೂಟಿಗೆ, ಕೊಲೆಗೆ ತುತ್ತಾಗಿ ಜನಜೀವನವೇ ಹಾಳಾಗಿರುವ ಪಂಜಾಬಿನ ಜನರಿಗೆ ಹಿಂದೂ-ಸಿಖ್ ಐಕ್ಯತೆಗೆ, ಭಯೋತ್ಪಾದಕರ, ಛಿದ್ರಕಾರರ ವಿರುದ್ಧ ಹೋರಾಟಕ್ಕೆ ಧೈರ್ಯದಿಂದ ಮುಂದೆ ಬರುವಂತೆ ಹುರಿದುಂಬಿಸುತ್ತಿದ್ದಾರೆ. ನೂರು ಜನರನ್ನೊಳಗೊಂಡ 45 ಜಾಥಾಗಳು ಕಳೆದ 15 ದಿವಸಗಳಿಂದ ಪಂಜಾಬಿನಲ್ಲಿ ಸುತ್ತಾಡುತ್ತಿವೆ. ಭೀತಿಗೊಳಗಾದ ಜನರಲ್ಲಿ ಧೈರ್ಯ ತುಂಬುತ್ತಿದೆ. ಜನರ ಐಕ್ಯತೆಗಾಗಿ ಹೋರಾಡಲು, ಛಿದ್ರಕಾರಿಗಳನ್ನು ಧಿಕ್ಕರಿಸಲು ಹುರಿದುಂಬಿಸುತ್ತಿದೆ

ಪಂಜಾಬಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೈಗೊಂಡಿರುವ ಚರಿತ್ರಾರ್ಹ, ಹೃದಯ ಸ್ಪರ್ಶಿ ಕಾರ್ಯಕ್ರಮ ಇದಾಗಿದೆ. ಭಯೋತ್ಪಾದಕರನ್ನು ಪ್ರತ್ಯೇಕಿಸಿ ಸದೆಬಡೆಯುವುದರಲ್ಲಿ ರಾಜ್ಯದ ಅಕಾಲಿ ಸರಕಾರ, ಕೇಂದ್ರದ ಕಾಂಗ್ರೆಸ್ ಸರಕಾರ ವಿಫಲವಾಗಿರುವಾಗ ದೇಶದ ಐಕ್ಯತೆ, ರಕ್ಷಣೆ ದೃಷ್ಟಿಯಿಂದ ಪಂಜಾಬಿನಲ್ಲಿ ಹಿಂದೂ-ಸಿಖ್ ಐಕ್ಯತೆ ಪ್ರಾಧಾನ್ಯವಾಗಿರುವುದರಿಂದಲೇ ಅದನ್ನು ಸಾಧಿಸುವ ಸಲುವಾಗಿ ಸಿಪಿಐ (ಎಂ) ಈ ಜಾಥಾ ಕಾರ್ಯಕ್ರಮ ಹಮ್ಮಿಕೊಂಡಿದೆ. ಜನರಿಂದ ಈ ಕಾರ್ಯಕ್ರಮ ಹಾರ್ದಿಕ ಸ್ವಾಗತ ಪಡೆಯುತ್ತಿದೆ.

○

ನಿರುಪಯುಕ್ತ ವಿಧಾನಸಭೆ ಸಮಾವೇಶ

ಕರ್ನಾಟಕ ರಾಜ್ಯದಲ್ಲಿ ನಾಲ್ಕು ಕೋಟಿ ಜನರ ಪೈಕಿ ಮೂರು ಕೋಟಿ ಜನ, ಸತತ ಬರಗಾಲಕ್ಕೆ ತುತ್ತಾಗಿ ಅನ್ನ ನೀರಿಲ್ಲದೆ ಎಲುಬಿನ ಗೂಡಾಗಿ ಕೊರಗುತ್ತಿರುವ ಕಣ್ಣೀರಿನ ಮಡುವಿನಲ್ಲಿ ಕರ್ನಾಟಕದ ಶಾಸಕರು ಆನಂದದ ಓಕುಳಿಯಾಡಿದರು. ಫೆಬ್ರವರಿ ಆರರಿಂದು ಪ್ರಾರಂಭವಾಗಿ ಮಾರ್ಚ 20ರಿಂದು ಮುಕ್ತಾಯಗೊಂಡ ಶಾಸನ ಸಭೆ ಆರೋಪ ಪ್ರತ್ಯಾರೋಪ, ವೈಯುಕ್ತಿಕ ಅವಹೇಳನ, ಮನೆಯ ಹೆಂಡತಿ-ಮಕ್ಕಳನ್ನೂ ಉಳಿಸದ ಹೀನಾಯ ಹೇಳಿಕೆಗಳೆಲ್ಲ ರಾಜ್ಯದಲ್ಲಿ ಭೀಕರ ಬರಗಾಲ ವಿದೆಯೇ, ಜನ-ಜಾನುವಾರುಗಳು ನೀರಿಲ್ಲದೆ, ಮೇವಿಲ್ಲದೆ ತಡಪಡಿಸುತ್ತಿದ್ದಾರೆಯೇ, ಸಾಯುತ್ತಿದ್ದಾರೆಯೇ, ಊರು ಬಿಟ್ಟು ಹೋಗುತ್ತಿದ್ದಾರೆಯೆ ?, ಎಂಬ ಮಹತ್ವದ ಜೀವಂತ ಸಮಸ್ಯೆಯನ್ನೇ ಮೂಲೆಗುಂಪು ಮಾಡಿವೆ. ಪತ್ರಿಕೆಗಳೆಲ್ಲೆಲ್ಲ ದಿನನಿತ್ಯ "ಭೀಕರ ಬರಗಾಲ" "ಸರಿಯಾದ ಪರಿಹಾರ ಕೆಲಸವಿಲ್ಲ" "ಪರಿಹಾರ ಹಣದಲ್ಲಿ ಪೋಲು" "ಹಣದ ದುರುಪಯೋಗ" ಎಂಬೆಲ್ಲ ಆರೋಪ ಹೊರಿಸುವ ಪ್ರಕಟನೆಗಳನ್ನೀಯುತ್ತಿದ್ದ ಶಾಸಕರೆಲ್ಲ ಬರೀ ಪ್ರಚಾರಕ್ಕಾಗಿಯೇ ಪತ್ರಿಕಾ ಹೇಳಿಕೆ ನೀಡುತ್ತಾರಲ್ಲದೆ, ಬರಗಾಲ ನಿವಾರಣೆಯ ನಿಜ ಉದ್ದೇಶದಿಂದಲ್ಲವೆಂಬ ಸಂಗತಿ ಶಾಸನ ಸಭೆಯ ಆಗುಹೋಗುಗಳಿಂದ ಬಹಿರಂಗವಾಗಿದೆ.

ಹೆಗಡೆಯವರ ರಾಜೀನಾಮೆಯ ನಂತರ ಬಾಟ್ಲಿಂಗ್ ಪ್ರಕರಣ ಮುಕ್ತಾಯವಾಗ ಬೇಕಾಗಿದ್ದರೂ ಕೂಡ ಹೆಚ್ಚಿನ ಸಮಯ ಬಾಟ್ಲಿಂಗ್ ಪ್ರಕರಣ, ಬಂಗಾರಪ್ಪನವರ ಕುರಿತು ರಮೇಶಕುಮಾರ್ ಅವರ ಟೇಪ್ ಪ್ರಕರಣ,ಮಾಜಿ ಕಾಂಗ್ರೆಸ್ ಅಧ್ಯಕ್ಷ ರಂಗನಾಥ್‌ಅವರ ಕೊಲೆ ಪ್ರಯತ್ನದ ಒಳಸಂಚಿನಲ್ಲಿ ಬಂಗಾರಪ್ಪನವರ ಪಾತ್ರದ ಕುರಿತು, ಗೃಹ ಮಂತ್ರಿ ರಾಚಯ್ಯನವರ ಹೇಳಿಕೆ, ಬಂಗಾರಪ್ಪ-ಹೆಗಡೆಯವರು ಒಬ್ಬರ ಮೇಲೊಬ್ಬರು ಅತಿ ನಿಕೃಷ್ಟ ರೀತಿಯ ಆರೋಪ, ಪ್ರತ್ಯಾರೋಪಗಳ ಸುರಿಮಳೆಗಳಿಗೆ ಸಾರ್ವಜನಿಕರ ಹಣ ಅಪವ್ಯಯವಾಗಿರುವುದನ್ನು ಕಾಣಬಹುದು.

ರಾಜ್ಯದ ಭೀಕರ ಬರಗಾಲ, ಅದರ ನಿವಾರಣೆಗೆ ಶಾಸಕರ, ಸರ್ಕಾರದ ನಿರ್ದಿಷ್ಟ ಸೂಚನೆಗಳು, ಹೆಚ್ಚಿನ ಪರಿಹಾರ ನೀಡಲು ಪಕ್ಷಭೇದಬಿಟ್ಟು ಕೇಂದ್ರದ ಮೇಲೆ ಒತ್ತಾಯ, ವಿದ್ಯುಶ್ಶಕ್ತಿ ಅಭಾವ, ಕುಡಿಯುವ ನೀರಿನ ತೊಂದರೆ, ನಿರುದ್ಯೋಗ ಸಮಸ್ಯೆ, ಕಾರ್ಖಾನೆಗಳ ಮುಚ್ಚುವಿಕೆ, ಕನಿಷ್ಟ ವೇತನ ಜ್ಯಾರಿ-ಇಂಥ ಸಮಸ್ಯೆಗಳ ಕುರಿತು ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳು ಒಟ್ಟಾಗಿ ಚರ್ಚೆಮಾಡಿ ಪರಿಹಾರ ಕಂಡುಹಿಡಿಯುತ್ತಾರೆ ಫೆಬ್ರವರಿ 6ರಂದು ಪ್ರಾರಂಭವಾದ ಬಜೆಟ್ ಅಧಿವೇಶನದಲ್ಲಿ ಎಂದು ಎಲ್ಲರೂ ಅಪೇಕ್ಷಿಸಿದ್ದರು. ಆದರೆ ಎಲ್ಲರಿಗೂ ನಿರಾಶೆ.

ಮುಖ್ಯಮಂತ್ರಿ ಕುರ್ಚಿಯ ಮೇಲೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿರುವ ಬಂಗಾರಪ್ಪನವರಿಗೆ ಯಾವ ನೀತಿ ನಿಯಮವೂ ಇಲ್ಲ. ಆ ಕುರ್ಚಿಯಲ್ಲಿ ಕೂಡ್ರುವ ಅವಕಾಶ ಯಾವಾಗ ದಕ್ಕೀತೆಂಬುದೇ ಅವರ ಹಂಬಲ. ಅವರಿ ರಾಮಕೃಷ್ಣ ಹೆಗಡೆಯವರು ಮಾತ್ರ ಬಾಟ್ಲಿಂಗ್ ಪ್ರಕರಣದಲ್ಲಿ ರಾಜೀನಾಮೆ ಕೊಟ್ಟು ಜನತಾ ಪಕ್ಷದ ಒತ್ತಾಯದಿಂದಾಗಿ ಮತ್ತೆ ಮುಖ್ಯ ಮಂತ್ರಿಯಾದ ನಂತರ ತಮ್ಮ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಳ್ಳುತ್ತಿದ್ದಾರೆಂಬ ವಿಷಯ ಮಾತ್ರ ಆರೋಗ್ಯಕರವಾದುದಲ್ಲ.

ಹೆಗಡೆಯವರಂಥ ರಾಜಕಾರಣಿಗೆ ಅವರಾಡಿದ ಮಾತುಗಳು ಶೋಭಿಸುವುದಂಥದ್ದಲ್ಲವೆಂದು ಸ್ಪಷ್ಟ ಹೇಳಬೇಕಾಗುತ್ತದೆ. ಬಂಗಾರಪ್ಪನವರೇ ಆಗಲಿ, ಹೆಗಡೆಯವರೇ ಆಗಲಿ, ಆ ರೀತಿ ನೋಡಿದರೆ ಕಾಂಗ್ರೆಸ್ಸಿನ ಹಾಗೆಯೇ ಹಿಂದಿನ ಕಾಂಗ್ರೆಸ್ಸಿನ, ಇಂದಿನಜನತಾ ಮಂತ್ರಿ ಮುಖಂಡರುಗಳೇ ಆಗಲಿ ಎಷ್ಟು ಆಸ್ತಿ ಮಾಡಿದ್ದಾರೆ, ಎಲ್ಲಿಂದ ಮಾಡಿದ್ದಾರೆ ಎಂಬ ವಿಷಯ ತಿಳಿದವರಾರೂ ಇಲ್ಲ ಅದನ್ನು ಅಸೆಂಬ್ಲಿಯಲ್ಲಿ ಉಲ್ಲೇಖಿಸುವ ಅಗತ್ಯವಿಲ್ಲ.

ಅಷ್ಟು ಕೆಳಮಟ್ಟಕ್ಕೆ ಹೋಗಿ "ಹರಿದೇಶಿ ನಾಗೀತಿ" ಹಾಡು ಹಾಡುವ ಕಾರಣವಿರಲಿಲ್ಲ, ಶಾಸನ ಸಭೆಯಲ್ಲಿ.

ಅಸೆಂಬ್ಲಿ ಅಧಿವೇಶನ ನಡೆದಾಗ ಪ್ರತಿ ದಿವಸ ಲಕ್ಷಾವಧಿ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಶಾಸಕರಿಗೆ ಭತ್ಯೆ ಬೇರೆ ಕೊಡಲಾಗುತ್ತಿದೆ, ಒಬ್ಬರ ಮೇಲೊಬ್ಬರು ಕೆಸರು ಎಸೆಯುವುದಕ್ಕೆ ನಾಗರೀಕರ ಹಣ ಖರ್ಚು ಮಾಡಲಾಗುತ್ತಿದೆಯೇ ? ಕರ್ನಾಟಕದ ಜನತೆಗೇನೇ ಬಹಳಷ್ಟು ಶಾಸಕರ ವರ್ತನೆ ಅತ್ಯಂತ ಹೇಯವಾಗಿತ್ತು.

ಆಳುವ ಜನತಾ ಸರ್ಕಾರ ವಾಗಲೀ ಇತರ ವಿರೋಧ ಪಕ್ಷಗಳಾಗಲೀ ಬರಗಾಲ ನಿವಾರಣೆಗೆ ನಿರ್ದಿಷ್ಟವಾದ "ನೀತಿ ನಿಲುವು" ಶಾಸನ

(8ನೇ ಪುಟ ನೋಡಿ)

ಕೋಲಾರ ಜಿಲ್ಲೆಯ ನೀರಾವರಿ ಸೌಕರ್ಯದಲ್ಲಿ ಹೆಚ್ಚಳ ಅಗತ್ಯ

ಜಿಲ್ಲೆಯ ಜನಸಂಖ್ಯೆ ಸುಮಾರು 20ಲಕ್ಷಕ್ಕೆ ಏರಿದೆ. ಜಿಲ್ಲೆಯಲ್ಲಿನ ಪಂಚಾಯಿತಿಗಳ ವಸೂಲಿ 1947ರಿಂದ 1980ಕ್ಕೆ ಹತ್ತರಷ್ಟು ಜಾಸ್ತಿಯಾಗಿದೆ. ಜಿಲ್ಲೆಯಲ್ಲಿನ ಬಡತನದ ರೇಖೆ ಶೇಕಡಾ 65ಕ್ಕೂ ಹೆಚ್ಚಿದೆ. ಜಿಲ್ಲೆಯಲ್ಲಿನ ಅಭಿವೃದ್ಧಿ ಮಟ್ಟ ದ್ವಿಗುಣವಾಗಿದೆ, 1947ರ ಮಟ್ಟದಿಂದ ಇಳಿಮುಖವಾಗುತ್ತಿದೆ. ಯಾವೊಂದು ವೃತ್ತಿಯಲ್ಲಿಯೂ ಅಂದುಕೊಂಡಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ಪಂಚವಾರ್ಷಿಕ ಪ್ರಣಾಳಿಕೆಗಳ ಫಲ ಕೋಲಾರ ಜಿಲ್ಲೆಗೆ ಅನ್ವಯಿಸುವುದಿಲ್ಲ ಎಂಬಂತಿದೆ.

ಪ್ರಗತಿಪಥವನ್ನು ಗಮನಿಸಬೇಕಾದದ್ದು ಜಿಲ್ಲೆಯಲ್ಲಿನ ಎರಡು ದೃಷ್ಟಿಗಳಿಂದ:

1. ವ್ಯವಸಾಯ ರಂಗದ ನೀರಾವರಿ ಯೋಜನೆಗಳು, 2. ಬಾವಿ, ಬೋರ್ ವೆಲ್ ತೋಡುವ ಯೋಜನೆಗಳು

ಈ ಎರಡೂ ರಂಗಗಳಲ್ಲಿ ಒಂದೊಂದನ್ನೂ ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಮುಖ್ಯ.

ಜಿಲ್ಲೆಯಲ್ಲಿನ ಒಟ್ಟು ವ್ಯವಸಾಯ ಯೋಗ್ಯ ಭೂಮಿ 3,27,190 ಹೆಕ್ಟೇರ್, ನೀರಾವರಿಗೆ ಒಳಪಟ್ಟಿರುವುದು, (ಕೆರೆ, ಬಾವಿಗಳಿಂದ) 50,692 ಹೆಕ್ಟೇರ್ ನೀರಾವರಿಯ ಪ್ರದೇಶ ಶೇಕಡಾ 29.7, ಜಿಲ್ಲೆಯಲ್ಲಿನ ಒಟ್ಟು ಕೆರೆಗಳು, 3,647, ಒಟ್ಟು ಬಾವಿಗಳು 52,227, ಪಂಪ್ ಸೆಟ್‌ಗಳು ಸುಮಾರು 43,000.

ಇದರಿಂದ ಎದ್ದು ಕಾಣುವ ಒಂದು ಸಮಸ್ಯೆ ಎಂದರೆ, ಶೇಕಡಾ 71ರಷ್ಟು ಜಮೀನಿನಲ್ಲಿ ಶೇಕಡಾ 50 ರಷ್ಟನ್ನಾದರೂ ಕೆರೆ, ಕಾಲುವೆ, ಬಾವಿ, ಬೋರ್ ವೆಲ್ ಅಚ್ಚುಕಟ್ಟಿನಲ್ಲಿ ತರಬಹುದೆಂಬ ಅಂಶ.

ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಹಾಕಿ, ಹೂಳು ಬಿದ್ದಿರುವ ಕೆರೆಗಳನ್ನು ಹೂಳು ತೆಗೆಸುವುದು, ಹೊಸ ಕೆರೆಗಳನ್ನು ಕಟ್ಟುವುದು, ಹೊಸ ಬಾವಿಗಳನ್ನು ಅಗೆಯುವುದು ಮುಂತಾದುವುಗಳ ಮುಖಾಂತರ ನೀರಾವರಿ ಆಶ್ರಯಕ್ಕೆ ತಂದು, ಜಿಲ್ಲೆಯ ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯ.

ಪಾಲಾರ್ ಅಚ್ಚುಕಟ್ಟಿನ ಅಭಿವೃದ್ಧಿ ಯೋಜನೆಯನ್ನು ಹಾಕಿದ್ದರೆ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಕೋಲಾರ, ಮುಳಬಾಗಿಲು, ಬಂಗಾರಪೇಟೆಯ ತಾಲೂಕುಗಳಲ್ಲಿನ ಅಚ್ಚುಕಟ್ಟುಗಳು ಈಗಿರುವುದಕ್ಕಿಂತ ಎರಡರಷ್ಟು ಹೆಚ್ಚಿಸಬಹುದಿತ್ತು. ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಪರಿಣಿತರಿಂದ ಸರ್ವೆ ಮಾಡಿಸಲಿಲ್ಲ. ನಮ್ಮ ಜಿಲ್ಲೆಯಲ್ಲಿ ಹುಟ್ಟಿ ಹರಿಯುವ ನೀರು ನಮಗೆ ಸಿಗದೆ ಆಂಧ್ರ, ತಮಿಳುನಾಡಿನವರಿಗೆ ಉಪಯೋಗವೆಂದರೆ ನಮಗೆ ಸಾಚಿಕೆಯಾಗಬೇಕು. ಈ ರೀತಿಯ ನೀರಿನ ಪೋಲಿನ ಅನ್ಯಾಯ ತಪ್ಪಿಸಲು ಒಂದೊಂದು ತಾಲೂಕಿನಲ್ಲಿಯೂ ಇಂತಹ ಯೋಜನೆಗಳಿಗೆ ಅವಕಾಶವಿದೆ. ಬಾಗೇಪಲ್ಲಿಯಲ್ಲಿನ ಚಿತ್ರಾವತಿ ನದಿ, ವಂದಮಾನ್ ನದಿ, ಗೌರಿಬಿದನೂರು ತಾಲೂಕಿನ ಉತ್ತರಪಿನಾಕಿನಿ (ಉತ್ತರ ಪೆನ್ನಾರ್) ಕುಮುದ್ವತಿ ನದಿ, ಗುಡಿಬಂಡೆ ತಾಲೂಕಿನ ಬೈರಸಾಗರ ನದಿ ಹಳ್ಳಗಳು, ಚಿಂತಾಮಣಿ – ಶಿಡ್ಲಘಟ್ಟ ತಾಲೂಕಿನ ಪಾಪಾಘ್ನಿ ನದಿ, ಕೋಲಾರ

ಆರ್. ವೆಂಕಟರಾಮಯ್ಯ

ತಾಲೂಕಿನಲ್ಲಿ ಪಾಲರ್ ನದಿ, ಮುಳುಬಾಗಿಲು ತಾಲೂಕಿನಲ್ಲಿ ಪಾಲಾರ್ ಬೇಸಿನ್ ಮತ್ತು ಕುರುಡು ಮಲೆಯ ಮೂಲವಾದ ಕೌಂಡಿನ್ಯ ನದಿ, ಮತ್ತು ಶೆಟ್ಟಿಗಲ್ಲು ಮುಖಾಂತರ ಆಂಧ್ರಕ್ಕೆ ಹೋಗುವ ಶೆಟ್ಟಿಗಲ್ಲು ಹೊಳೆ, ಕೈಗಲ್ಲು ನದಿ ಮತ್ತು ಕೊರ್ಲ್ಲಕುಂಟೆಯಿಂದ ಹೊರಡುವ ನದಿಯನ್ನು, ಮಾಲೂರಿನಲ್ಲಿರುವ ಹೊಳೆಗಳು, ಬಂಗಾರು ಪೇಟೆಯಲ್ಲಿನ ದಕ್ಷಿಣ ಪೆನ್ನಾರ್ ಬೇಸಿನ್, ಪಾಲಾರ್ ಬೇಸಿನ್ ನದಿಗಳ ಅಭಿವೃದ್ಧಿಯ ಬಗ್ಗೆ, ಮಾರ್ಕಂಡೇಯ ನದಿ ಪ್ರಾಜೆಕ್ಟ್ ಸರಣಿ, ಕೊಪ್ಪಕೆರೆ ಹಳ್ಳ, ಪರಿಣಿತರ ಮುಖಾಂತರ ಅಭಿವೃದ್ಧಿ ಮಾಡಿದ್ದಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ನೀರಾವರಿ ಸಮಸ್ಯೆಗಳನ್ನು ತೆಗೆದುಕೊಂಡು ಈ ಯೋಜನೆಗಳನ್ನು ರೂಪಿಸಿದಲ್ಲಿ ಜಿಲ್ಲೆಯ ರೂಪರೇಖೆಗಳನ್ನು ಬದಲಾಯಿಸಬಹುದು. ಇದಕ್ಕಿರುವ ಮುಖ್ಯ ಅಡ್ಡಿ (ಇಂಟರ್‌ಸ್ಟೇಟ್ ರಿವರ್ಸ್ ಆಗ್ರಿಮೆಂಟ್) ಆಂಧ್ರ, ತಮಿಳುನಾಡು, ಕರ್ನಾಟಕ ನದಿ ನೀರಿನ ಹಂಚಿಕೆ ಕುರಿತು ಒಪ್ಪಂದ.

ಇದು ಒಂದು ಮುಖವಾದರೆ ಜಿಲ್ಲೆಯಲ್ಲಿನ ನೀರಾವರಿ ಅಭಿವೃದ್ಧಿಯ ಇನ್ನೊಂದು ಮುಖ ಬಾವಿಗಳು.

ಈಗ ಇರುವ ಬಾವಿಗಳು ಸುಮಾರು 52 ಸಾವಿರ. ಇದನ್ನು ಯೋಜಿತವಾಗಿ ದ್ವಿಗುಣಗೊಳಿಸಬೇಕು. ಭೂಮಿಯಲ್ಲಿನ ಅಂತರ್ಗತ ಜಲವನ್ನು ಹೊರತೆಗೆದರೆ ಈ ಜಿಲ್ಲೆಯಲ್ಲಿನ ರೈತರಿಗೆ ಸಹಾಯವಾಗುವುದಲ್ಲದೆ ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿಯನ್ನು ಶಾಶ್ವತವಾಗಿ ತಪ್ಪಿಸಿ ಈ ಜಿಲ್ಲೆಯ ರೈತರು ತಲೆಎತ್ತಿ ಆರ್ಥಿಕವಾಗಿ ಬಹಳ ಮುಂದೆ ಹೆಜ್ಜೆ ಹಾಕಲು ಅನುಕೂಲವಾಗುವುದು

ಈ ಬಗ್ಗೆ ಸರ್ಕಾರ ಮಾಸ್ಟರ್ ಪ್ಲಾನ್ ಹಾಕಿ ಮತ್ತು ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆ ತೋರದೆ, ಜಿಲ್ಲೆಯ ಮುಖಂಡರು ಪಕ್ಷಭೇದಗಳನ್ನು ಮರೆತು ಜಿಲ್ಲೆಯ ಈ ಒಂದು ಕನಿಷ್ಠ ಬೇಡಿಕೆಯನ್ನು ಈಡೇರುವಂತೆ ಮಾಡಲು ಹೋರಾಡಬೇಕು.

ಇನ್ನೊಂದು ಮುಖ್ಯ ಅಂಶವೆಂದರೆ ಜಿಲ್ಲೆಯಲ್ಲಿನ ನೀರಾವರಿಯ ಸಮಸ್ಯೆಯ ತೀರಿಕೆಗೆ ಬೋರ್‌ವೆಲ್‌ಗಳನ್ನ ತೋಡುವುದು, ಸರ್ಕಾರ ಬಡಸ್ತೈತರ 10-20 ಎಕರೆಗಳಿಗೆ ಒಂದು ಕಡೆ ಬೋರ್‌ವೆಲ್ ಬಾವಿಗಳನ್ನು ತೋಡಿದರೆ ಜಿಲ್ಲೆಯಲ್ಲಿನ ನೀರಾವರಿಯ ಜಮೀನು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಈಗ ಶ್ರೀಮಂತ ರೈತರು ಮಾತ್ರ ಈ ಬೋರ್‌ವೆಲ್‌ಗಳನ್ನು ಹಾಕಲು ಸಾಧ್ಯವಾಗಿದೆ. ಸಾಧಾರಣವಾಗಿ ಎಲ್ಲಾ ಬಾವಿಗಳು ಜಯಪ್ರದವಾಗಿದೆ. ಆದರೆ ಇದೇ ಕೆಲಸವನ್ನು ಸರ್ಕಾರಿ ಸ್ವಾಮ್ಯದ ಅಗ್ರೋ ಇಂಡಸ್ಟ್ರೀಸ್‌ಗೆ ವಹಿಸಿದ್ದಲ್ಲಿ ಅರ್ಧ ಖರ್ಚಿನಲ್ಲಿ ಆಗುವುದು.

ಹೀಗೆ ಒಂದು ಪ್ರಣಾಳಿಕೆಯನ್ನು ಹಾಕಿದ್ದಲ್ಲಿ ಜಿಲ್ಲೆಯಲ್ಲಿ ಈಗಿರುವ ನೀರಾವರಿ ಬೆಳೆಗಳನ್ನು ದ್ವಿಗುಣ ಮಾಡಬಹುದು. ಈ ಬಗ್ಗೆ ಸರ್ಕಾರ ತುರ್ತು ಗಮನಕೊಟ್ಟು, 7ನೇ ಯೋಜನೆಯಲ್ಲಾದರೂ ಸರಿಯಾದ ಕ್ರಮಕೈಗೊಳ್ಳುವುದು ಅಗತ್ಯ. ಈ ದಿಸೆಯಲ್ಲಿ ಪ್ರಾಂತ ರೈತ ಸಂಘ, ಸಿಪಿಐ (ಎಂ) ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳು ಆಂದೋಲನ ನಡೆಸುವುದು ಅಗತ್ಯವೆಂದು ಹೇಳಲಿಚ್ಛಿಸುತ್ತೇನೆ.

(ವಿಧಾನ ಸಭೆಯಲ್ಲಿ ಮಾಡಿದ ಭಾಷಣದ ಸಂಗ್ರಹಾನುವಾದ)

ರೈತ ರಂಗ

ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಸಮ್ಮೇಳನಗಳು

ಮಂಗಳೂರು

ಮಂಗಳೂರು ತಾಲೂಕು ರೈತ ಸಮ್ಮೇಳನವು ತಾ 9-3-1986ರಂದು ಗುರುಪುರ ಕೈಕಂಬದಲ್ಲಿ ಎಂ. ಎಸ್ ನಾರಾಯಣರವರ ಧ್ವಜಾರೋಹಣದಿಂದ ಪ್ರಾರಂಭವಾಯಿತು. ಸಮ್ಮೇಳನದಲ್ಲಿ 130 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನದ ಅಧ್ಯಕ್ಷ ಮಂಡಳಿಗೆ ಸರ್ವಶ್ರೀ ಎಂ. ಎಸ್. ನಾರಾಯಣ, ಪಿ. ಪರಮೇಶ್ವರ ಶೆಟ್ಟಿ ಮತ್ತು ಬಿ ಬಾಬು ಪಾವೂರು ಇವರನ್ನು ಆರಿಸಲಾಯಿತು.

ಪ್ರಾರಂಭದಲ್ಲಿ ರಾಮಚಂದ್ರ ಉಚ್ಚಿಲ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಮ್ಮೇಳನದ ಉದ್ಘಾಟನೆಯನ್ನು ಜನಾರ್ಧನ ಕ್ಯಾಕರು ಮಾಡುತ್ತಾ ಸಂಘವು ಕಳೆದ 50 ವರ್ಷಗಳಿಂದ ನಡೆಸಿದ ಚಳುವಳಿ ಹಾಗೂ ಇದರ ಪರಿಣಾಮವಾಗಿ ರೈತರಿಗೆ ರಕ್ಷಣೆಯ ಕಾನೂನು ಬಂದರೂ ಅದರ ನಿಜವಾದ ಪ್ರಯೋಜನವು ರೈತರಿಗೆ ಇನ್ನೂ ದೊರೆತಿಲ್ಲ. ಇದ್ದುದರಿಂದ ರೈತರು ತಮ್ಮ ಸಂಘಟನೆಯನ್ನು ಬಲಪಡಿಸಿ ಬಲಯುತವಾದ ಚಳುವಳಿಯನ್ನು ನಡೆಸಲು ಮುಂದಾಗಬೇಕೆಂದು ಕರೆ ನೀಡಿದರು.

ಸಮ್ಮೇಳನಕ್ಕೆ ಶುಭಕೋರಿ, ಸಹೋದರ ಸಂಘಟನೆಗಳಾದ ಕ್ಯಾಶ್ಯೂನಟ್ ಅಂಡ್ ಎಲ್ಯಾಡ್ ವರ್ಕರ್ಸ್ ಯೂನಿಯನ್‌ನ ಕಮಲಾಕ್ಷ ಯಂ. ಬಂಗೇರ, ಪಡವು ಪ್ರದೇಶದ ಬೀಡಿ ಕೆಲಸಗಾರರ ಸಂಘದ ಬಾಬು ದೇವಾಡಿಗ, ವಾಮಂಜೂರು ಪ್ರದೇಶದ ಬೀಡಿ ಕೆಲಸಗಾರರ ಸಂಘದ ಗಂಗಯ್ಯ ಅಮೀನ್, ಕುಪ್ಪೆಪದವು ಬೀಡಿ ಕೆಲಸಗಾರರ ಸಂಘದ ವಾಸುದೇವ ಆಚಾರಿ ಗುರುಪುರ ಸರ್ಕಿಟ್ ಬೀಡಿ ಕೆಲಸಗಾರರ ಹೊನ್ನಯ್ಯ, ಸ್ಟೂಡೆಂಟ್ ಫೆಡರೇಶನ್ ಆಫ್ ಇಂಡಿಯಾದ ಸುನಿಲ್ ನಾಟೇಕಾರ್ ಮತ್ತು ಡಿವೈಎಫ್‌ನ ಶಿವಾನಂದ ಕೋಡಿಯವರು ಮಾತನಾಡಿದರು.

ತಾಲೂಕು ರೈತ ಸಂಘದ ಪರವಾಗಿ ಯು. ಪಿ. ಡಿಸೋಜರವರು ಕಳೆದ ನಾಲ್ಕು ವರ್ಷಗಳಲ್ಲಿ ರೈತಸಂಘ ನಡೆಸಿದ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಚರ್ಚೆ ವಿಮರ್ಶೆಗಳು ನಡೆದು, ರೈತರನ್ನು ಬಾಧಿಸುತ್ತಿರುವ ಹಲವಾರು ಸಮಸ್ಯೆಗಳನ್ನು ವಿವರಿಸಿದ ನಂತರ ವರದಿಯು ಅಂಗೀಕರಿಸಲ್ಪಟ್ಟಿತು.

ರೈತರ ಹಾಗೂ ಕೃಷಿ ಕೂಲಿಗಾರರ ಸಮಸ್ಯೆಗಳ ಮತ್ತು ಅದನ್ನು ಎದುರಿಸಲು ಸಂಘಟನೆಯನ್ನು ಬಲಿಷ್ಠಗೊಳಿಸಿ ದೀರ್ಘವಾದ ಸಮರ ಧೀರ ಹೋರಾಟವನ್ನು ನಡೆಸಬೇಕೆಂದು ಕರೆಗೊಡುತ್ತಾ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾ ಕಾರ್ಯದರ್ಶಿಯವರಾದ ಕೆ. ಆರ್. ಶ್ರೀಯಾನ್ ಮತ್ತು ದ. ಕ. ಜಿಲ್ಲಾ ರೈತರ ಸಂಘದ ಅಧ್ಯಕ್ಷರಾದ ಕಾ ಅಬ್ರಹಾಂ ಕರ್ಕಡರು ಪ್ರತಿನಿಧಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಬಳಿಕ ನೂತನ ಸಮಿತಿಯ ಚುನಾವಣೆ ನಡೆದು, ಕಾ. ಎ. ಬಾಬು ಪಾವೂರು, ಕಾರ್ಯದರ್ಶಿಯಾಗಿಯೂ ಉಪಾಧ್ಯಕ್ಷರುಗಳಾಗಿ ಕಾ. ಎಂ ಎಸ್. ನಾರಾಯಣ ಮತ್ತು ಪೂವಪ್ಪ ಸಾಲ್ಯಾನ್, ಪ್ರಧಾನ ಕಾರ್ಯದರ್ಶಿಯಾಗಿ ಕಾ ರಾಮಚಂದ್ರ ಉಚ್ಚಿಲ್, ಜೊತೆ ಕಾರ್ಯದರ್ಶಿಗಳಾಗಿ ಕಾ. ಯು ಪಿ ಡಿ ಸೋಜ ಮತ್ತು ಗಂಗಯ್ಯ ಶೆಟ್ಟಿ, ಕೋಶಾಧಿಕಾರಿಯಾಗಿ ಪರಮೇಶ್ವರ ಶೆಟ್ಟಿಯವರನ್ನೊಳಗೊಂಡ 42 ಮಂದಿಯ ಕಾರ್ಯಕಾರೀ ಸಮಿತಿಯನ್ನು ಆರಿಸಲಾಯಿತು.

ತಾ॥ 30-3-86 ಮತ್ತು ತಾ॥ 31-3-86 ಕ್ಕೆ ಮಂಗಳೂರಿನಲ್ಲಿ ನಡೆಯಲಿರುವ ದ ಕ ಜಿಲ್ಲಾ ಸಮ್ಮೇಳನಕ್ಕೆ ಮಂಗಳೂರು ತಾಲೂಕಿನಿಂದ 60 ಪ್ರತಿನಿಧಿಗಳನ್ನು ಆರಿಸುತ್ತಾ ದ. ಕ. ಜಿಲ್ಲಾ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸರ್ವ ಪ್ರಯತ್ನ ಮಾಡಬೇಕೆಂದು ತೀರ್ಮಾನಿಸಲಾಯಿತು.

ಅಧ್ಯಕ್ಷ ಮಂಡಳಿಯ ಭಾಷಣದ ನಂತರ ಕಾ. ರಾಮಚಂದ್ರ ಉಚ್ಚಿಲ್ ಧನ್ಯವಾದವಿತ್ತರು. ಸಂಜೆ 5 ಗಂಟೆಗೆ ಕೈಕಂಬದಲ್ಲಿ ಸಾರ್ವಜನಿಕ ಸಭೆ ಜರಗುವ ಮುಂಚೆ ರೈತ ಕಾರ್ಯಕರು ಮೆರವಣಿಗೆಯಲ್ಲಿ ಸಭಾಸ್ಥಳಕ್ಕೆ ಬಂದಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾ. ಯಂ ಎಸ್. ನಾರಾಯಣ ವಹಿಸಿದರು ಮುಖ್ಯ ಭಾಷಣಕಾರರಾಗಿ ಕಾ ಕೆ ಆರ್ ಶ್ರೀಯಾನ್, ಕಾ. ಜನಾರ್ಧನಸಾಯ್ಕ, ಕಾ ಅಬ್ರಹಾಂ ಕರ್ಕಡ ಮಾತಾಡಿದರು ಅಧ್ಯಕ್ಷ ಭಾಷಣದ ನಂತರ ಕಾ. ಎಂ. ಕೃಷ್ಣನ್ ಧನ್ಯವಾದವಿತ್ತರು

ಬೆಂಗಳೂರು ದಕ್ಷಿಣ

ಬೆಂಗಳೂರು ದಕ್ಷಿಣ ತಾಲ್ಲೂಕಿನ ರೈತ ಸಮ್ಮೇಳನವು ಕೆಂಗೇರಿ ಹೋಬಳಿ ಚನ್ನವೀರಯ್ಯನ ಪಾಳ್ಯದಲ್ಲಿ 15 3.86ರಂದು ನಡೆಯಿತು

ಜಿಲ್ಲಾ ಅಧ್ಯಕ್ಷರಾದ ಸಿ. ರಾಮಭದ್ರಯ್ಯನವರು ಸಮ್ಮೇಳನವನ್ನು ಉದ್ಘಾಟಿಸಿದರು. ಲಕ್ಕಣ್ಣ ಅಧ್ಯಕ್ಷತೆ ವಹಿಸಿದ್ದರು ಹಿಂದಿನ ಜಿಲ್ಲಾ ಕಾರ್ಯದರ್ಶಿ ಜಗನ್ನಾಥರವರು ವರದಿಯನ್ನಿತ್ತರು. ವರದಿಯ ಮೇಲಿನ ಚರ್ಚೆಯಲ್ಲಿ 8 ಜನರು ಭಾಗವಹಿಸಿ ತಾಲೂಕಿನ ರೈತರ ಪರಿಸ್ಥಿತಿ ಹಾಗೂ ಸಂಘಟನೆಯನ್ನು ಬೆಳೆಸಲು ಯಾವ ರೀತಿ ಶ್ರಮಿಸಬೇಕೆಂದು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

ನಂತರ 23 ಜನರನ್ನೊಳಗೊಂಡ ತಾಲ್ಲೂಕು ಸಮಿತಿಯನ್ನಾರಿಸಲಾಯ್ತು. ತಾಲ್ಲೂಕು ಸಮಿತಿ ಅಧಿಕಾರಿವರ್ಗ— ಎಚ್. ಸಿ.ಶಾಮಣ್ಣರೆಡ್ಡಿ, ಅಧ್ಯಕ್ಷರು; ಲಕ್ಕಣ್ಣ ಕಾರ್ಯದರ್ಶಿ; ಗೋಪಾಲಗೌಡ, ಎಸ್. ಚನ್ನಪ್ಪ ಉಪಾಧ್ಯಕ್ಷರುಗಳು; ವೆಂಕಟಾಚಲಯ್ಯ, ಗುಂಡಪ್ಪ ಕಾರ್ಯದರ್ಶಿಗಳು; ಮುನಿರಾಜು ಖಜಾಂಜಿ. ಜಿಲ್ಲಾ ಸಮ್ಮೇಳನಕ್ಕೆ 40 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯ್ತು.

ಹೊಸಕೋಟೆ

ಹೊಸಕೋಟೆ ತಾಲ್ಲೂಕು ರೈತ ಸಮ್ಮೇಳನವು 14-3-86 ರಂದು ಚನ್ನಸಂದ್ರದಲ್ಲಿ ನಡೆಯಿತು. ಟಿ ಮುನಿಸ್ವಾಮಿಯವರು ಸಂಘಟನಾ ಚಟುವಟಿಕೆಯ ವರದಿಯನ್ನಿತ್ತರು.

ಅಧ್ಯಕ್ಷತೆಯನ್ನು ಹರೀಂದ್ರರವರು ವಹಿಸಿದ್ದರು ಸಂಘಟನಾ ಪರಿಸ್ಥಿತಿಯ ಬಗ್ಗೆ ಹಾಗೂ ಸಂಘನೆಯನ್ನು ಬಲಪಡಿಸುವಂತೆ ಜಿಲ್ಲಾ ಕಾರ್ಯದರ್ಶಿ ಲಕ್ಕಣ್ಣ ಕರೆ ನೀಡಿದರು. 9 ಜನರ ಸಂಘಟನಾ ಸಮಿತಿಯನ್ನು ರಚಿಸಲಾಯ್ತು. ಜಿಲ್ಲಾ ಸಮ್ಮೇಳನಕ್ಕೆ ತಾಲೂಕಿನಿಂದ 12 ಜನ ಪ್ರತಿನಿಧಿಗಳನ್ನು ಆಯ್ಕೆಮಾಡಲಾಯ್ತು.

ತ್ರಿಪುರಾ : 8 ವರ್ಷ ತುಂಬಿದ ಎಡರಂಗ ಸರ್ಕಾರ

ತ್ರಿಪುರದ ಎಡರಂಗ ಸರ್ಕಾರಕ್ಕೆ 8ವರ್ಷ ತುಂಬಿದೆ. 8ವರ್ಷಗಳ ಹಿಂದೆ ತುರ್ತುಪರಿಸ್ಥಿತಿ ನಂತರದಪ್ರಜಾಪ್ರಭುತ್ವ ಆಂದೋಲನದ ಅಲೆಯಲ್ಲಿ ಅಧಿಕಾರ ವಹಿಸಿಕೊಂಡ ಎಡರಂಗ, ಕೇಂದ್ರ ಸರ್ಕಾರದ ಅಸಹಕಾರ, ಅಡೆತಡೆ ಆರ್ಥಿಕ ದಿಗ್ಬಂಧನ ಮತ್ತು ಅಧಿಕಾರ ವಿರೋಧಿಯ ಮಧ್ಯೆಯೂ ಎರಡನೇ ಅವಧಿಗೂ ಚುನಾಯಿತಗೊಂಡು ಜನತೆಯ ನಿರೀಕ್ಷೆಯ ಮಟ್ಟಕ್ಕೆ ಬಂದಿದೆ.

ಎಡರಂಗದ ಮೊದಲ ಕೆಲಸ ಸ್ವಾಭಾವಿಕವಾಗಿಯೇ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಪುನಃ ಸ್ಥಾಪನೆ ಮತ್ತು ಅದನ್ನು ಬಲಪಡಿಸಿದ್ದು, ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲಾಯಿತು. ಕಲಮು 310 ಮತ್ತು 311 ರ ಪ್ರಕಾರ ವಜಾಮಾಡಲಾಗಿದ್ದ ಕಾರ್ಮಿಕರನ್ನು ಅವಧಿಯ ಸಂಬಳ ಸಮೇತ ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಎಲ್ಲಾ ಕಾರ್ಮಿಕರಿಗೂ –ಪೋಲೀಸ್ ಮತ್ತು ಜೈಲು ಸಿಬ್ಬಂದಿ ಸೇರಿ–ತಮ್ಮ ಹಕ್ಕುಗಳ ರಕ್ಷಣೆ ಮಾಡಿಕೊಳ್ಳಲು ಸಂಘಟನೆ ಕಟ್ಟಿಕೊಳ್ಳಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಪ್ರಜಾಪ್ರಭುತ್ವದ ವಿಸ್ತರಣೆ

ಎಲ್ಲಾ ಹಂತಗಳಲ್ಲಿ ಚುನಾವಣೆಗಳನ್ನು ನಡೆಸುವ ಮೂಲಕ, ಚುನಾಯಿತ ಪ್ರತಿನಿಧಿಗಳು ಅಧಿಕಾರ ವಹಿಸಿಕೊಂಡು ಪ್ರಜಾಸತ್ತೆಯನ್ನೂ ಆಡಳಿತದಲ್ಲಿ ಜನತೆಯ ಪಾಲುಗೊಳ್ಳುವಿಕೆಯನ್ನು ಬಲಪಡಿಸಲಾಗಿದೆ. ಈ ದಿಸೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಕಾಲಿಕ ಚುನಾವಣೆ ಮತ್ತು ಪಂಚಾಯಿತುಗಳ ಸಕ್ರಿಯ ಕೆಲಸ ತ್ರಿಪುರಾದ ರಾಜಕೀಯಜೀವನದಲ್ಲಿ ಮೈಲಿಗಲ್ಲು. ಬಹು ಸಂಖ್ಯೆಯ ಗ್ರಾಮ ಪಂಚಾಯಿತಿಗಳಲ್ಲಿ ಎಡರಂಗ ಅಧಿಕಾರ ವಹಿಸಿಕೊಂಡಿದೆ ಎಂಬುದು ಎಡರಂಗದ ಭದ್ರ, ವಿಶಾಲ ತಳಹದಿಯನ್ನು ತೋರಿಸುತ್ತದೆ. ನಗರ ಸಭೆ, ಗ್ರಾಮ ಪಂಚಾಯಿತಿಗಳಿಗೆ ಕೆಲಸ ನಿರ್ವಹಿಸಲು ಬೇಕಾದ ಆಡಳಿತ ಮತ್ತು ಆರ್ಥಿಕ ಅಧಿಕಾರಗಳನ್ನು ವರ್ಗಾಯಿಸಲಾಗಿದೆ.

ಆದಿವಾಸಿ ಮತ್ತು ಆದಿವಾಸೇತರ ಜನರ ಐಕ್ಯವನ್ನು ಮುರಿಯುವ ಎಲ್ಲಾ ಒತ್ತಡಗಳನ್ನು ಆಡಳಿತಾತ್ಮಕವಾಗಿಯೂ, ರಾಜಕೀಯವಾಗಿಯೂ, ಎದುರಿಸಿದ್ದು ಎಡರಂಗದ ಇನ್ನೊಂದು ದೊಡ್ಡ ಸಾಧನೆ. ಅದೇ ಸಮಯದಲ್ಲಿ ಆದಿವಾಸಿಗಳ ಆಕಾಂಕ್ಷೆಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ಆದಿವಾಸಿಗಳು ಬಹು ಸಂಖ್ಯಾತರಾಗಿರುವ ಪ್ರದೇಶಗಳಿಗೆ ಒಂದಾಗಿ ಪ್ರತ್ಯೇಕ ಸ್ವಾಯತ್ತ ಜಿಲ್ಲಾ ಮಂಡಳಿಗೆ ಅಗತ್ಯ ಕಾನೂನು ಜಾರಿಗೆ ತಂದು, ಚುನಾವಣೆಗಳ ಮೂಲಕ ಈ ಮಂಡಳಿ ರಚಿಸಿದ್ದು ದೇಶದಲ್ಲೇ ಅತಿದೊಡ್ಡ ಸಾಧನೆ. ಆದಿವಾಸಿಗಳ ಭಾಷೆ ಕೊಕ್‌ಬೊರಾಕ್‌ನ್ನು ರಾಜ್ಯ ಭಾಷೆಯಾಗಿ ಅಂಗೀಕರಿಸಿದ್ದು, ಆದಿವಾಸಿ ಪ್ರದೇಶಗಳಲ್ಲಿ ಶಿಕ್ಷಣ ಮತ್ತು ಸಾಂಸ್ಕೃತಿಕ ಅನುಕೂಲಗಳನ್ನು ಮಾಡಿಕೊಟ್ಟಿದ್ದು, ಆದಿವಾಸಿಗಳಿಂದ ಕಿತ್ತುಕೊಂಡ ಜಮೀನು ವಾಪಸಾತಿ, ಆದಿವಾಸಿಗಳಿಗೆ ಸಂವಿಧಾನ ಬದ್ಧ ಮೀಸಲಾತಿ ಸವಲತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದದ್ದು ಎಡರಂಗದ ಇತರ ಕ್ರಮಗಳು. ಎಡರಂಗದ ಇಂತಹ ಎಲ್ಲಾ ಪ್ರಯತ್ನಗಳಿಗೆ ಪ್ರತ್ಯೇಕತಾವಾದಿ ಆದಿವಾಸಿ ಪಕ್ಷ ಟಿ ಯು ಜೆ ಎಸ್, ಅದರ ಸಶಸ್ತ್ರ ಗೆರಿಲ್ಲಾ ಗುಂಪು ಟಿ ಎನ್ ವಿ ಮತ್ತು ಇವರಿಗೆ ಪಕ್ಕಾ ಸಂಪೂರ್ಣ ಬೆಂಬಲ ನೀಡಿದ "ರಾಷ್ಟ್ರೀಯ ಪಕ್ಷ" ಕಾಂಗ್ರೆಸ್ ತೊಂದರೆಗಳನ್ನೊಡ್ಡುತ್ತಾ ಬಂದಿವೆ. ಇದು ಹಲವು ಬಾರಿ ಭಯೋತ್ಪಾದನೆ, ಹಿಂಸಾಚಾರ, ಕೋಮು ಗಲಭೆಗಳಿಗೆಡೆ ಕೊಟ್ಟಿದೆ. ಅಮ್ರ ಬಂಗಾಲಿ ಎಂಬ ಬಂಗಾಲಿ ಉಗ್ರವಾದಿಗಳೂ ಹಿಂಸಾತ್ಮಕವಾಗಿ ಜನರ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಜನರ ಐಕ್ಯತೆಯನ್ನು ಕಾಪಾಡುತ್ತಾ ಬೇರೆ ಬೇರೆ ಜನವಿಭಾಗಗಳ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಪೂರೈಸುತ್ತಾ, ಪ್ರತ್ಯೇಕತಾವಾದದ ವಿರುದ್ಧ ಹೇಗೆ ಹೋರಾಡಬಹುದು ಎಂಬುದನ್ನು ಎಡರಂಗ ತೋರಿಸಿಕೊಟ್ಟಿದೆ. ಇಂತಹುದೇ ಸನ್ನಿವೇಶದಲ್ಲಿ ಅಸ್ಸಾಂ, ಪಂಜಾಬ್ ಮುಂತಾದ ಕಡೆ ಕಾಂಗ್ರೆಸ್ ಮತ್ತು ಇತರ ಬೂರ್ಜ್ವಾ ಭೂಮಾಲಿಕ ವಿರೋಧ ಪಕ್ಷಗಳ ಸಂಧರ್ಭಸಾಧಕತನ, ವಿಫಲತೆಗಳ ಹಿನ್ನೆಲೆಯಲ್ಲಿ ದೇಶದ ಮುಂದೆ ಎಡರಂಗ ಒಂದು ಹೊಸ ಮಾದರಿಯನ್ನಿಟ್ಟಿದೆ.

ಟಿ.ಎನ್.ವಿ ಉಗ್ರಗಾಮಿಗಳಿಗೆ ತಿರುಗುಬಾಣ

ತ್ರಿಪುರಾ ನ್ಯಾಶನಲ್ ವೊಲಂಟಿಯರ್ಸ್ (ಟಿ ಎನ್ ವಿ) ಎಂಬ ಉಗ್ರಗಾಮಿ ಸಂಘಟನೆ ಎಡರಂಗ ಸರಕಾರದ ವಿರುದ್ಧ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದು ಶಾಲೆಯ ಮಕ್ಕಳನ್ನು ಅಪಹರಿಸುವುದಕ್ಕೂ ಹೇಸುವುದಿಲ್ಲ. ಇದೇ ರೀತಿಯಲ್ಲಿ ಅಪಹೃತರಾಗಿದ್ದ, ದಕ್ಷಿಣ ತ್ರಿಪುರಾದ ಸಬ್ರೂಮ್‌ನ ಇಬ್ಬರು ಶಾಲಾ ಬಾಲಕರು-8 ನೇ ತರಗತಿಯ ರೂಪಚಂದ್ರ ತ್ರಿಪುರಾ ಮತ್ತು ರಂಜಸಾತ್ರಿಪುರಾ ತಮ್ಮ ಧೈರ್ಯ ಮತ್ತು ಚಾಕಚಕ್ಯತೆ ಪ್ರದರ್ಶಿಸಿದ್ದಾರೆ. ಅಪಹೃತರಾಗಿ ಶಸ್ತ್ರ ತರಬೇತಿ ಕೊಟ್ಟು, ರಾತ್ರಿ ಕಾವಲಿಗೆ ಈ ಬಾಲಕರನ್ನು ನೇಮಿಸಿದಾಗ ಇಬ್ಬರು ಕುಖ್ಯಾತ ಟಿ. ಎನ್. ವಿ ನಾಯಕರಾದ ಬಿಸ್ವಜಿತ್ ಡೆಬ್ ಬರ್ಮಾ ಮತ್ತು ಮೋಹನ್ ತ್ರಿಪುರಾರನ್ನು ಗುಂಡಿಟ್ಟು ಕೊಂದು, ತಮ್ಮ ಮನೆಗಳಿಗೆ ಹಿಂತಿರುಗಿದ್ದಾರೆ. ಟಿ ಎನ್ ವಿಯ ಭಯೋತ್ಪಾದಕ ಚಟುವಟಿಕೆಗಳು ಅವರಿಗೇ ತಿರುಗುಬಾಣವಾಗಿದೆ. ಟಿ.ಎನ್.ವಿ ಯ ವಿರುದ್ಧ ಜನರ ಭಾವನೆಯನ್ನು ಈ ಘಟನೆ ತೋರಿಸುತ್ತದೆ

ಶಿಕ್ಷಣದಲ್ಲಿ ಮುನ್ನಡೆ

	8 ವರ್ಷಗಳ ಹಿಂದೆ	ಈಗ	ಏರಿಕೆ
1. ಪ್ರಾಥಮಿಕ			
ಶಾಲೆಗಳ ಸಂಖ್ಯೆ	1528	2432	904
ವಿದ್ಯಾರ್ಥಿಗಳ ಸಂಖ್ಯೆ	198, 104	369,280	ಎರಡುಪಟ್ಟು
2. ಮಾಧ್ಯಮಿಕ			
ಶಾಲೆಗಳ ಸಂಖ್ಯೆ	282	678	396
ವಿದ್ಯಾರ್ಥಿಗಳ ಸಂಖ್ಯೆ	48936	93450	ಎರಡುಪಟ್ಟು
3. ಹೈಸ್ಕೂಲು ಹಂತ			
ಶಾಲೆಗಳ ಸಂಖ್ಯೆ	105	289/ಸುಮಾರು ಎರಡೂವರೆಪಟ್ಟು	
ವಿದ್ಯಾರ್ಥಿಗಳ ಸಂಖ್ಯೆ	18,811	86,912	ಎರಡುಪಟ್ಟು
4 ಹೈಯರ್ ಸೆಕೆಂಡರಿ ಹಂತ			
ಶಾಲೆಗಳ ಸಂಖ್ಯೆ	30	92	ಮೂರುಪಟ್ಟು
ವಿದ್ಯಾರ್ಥಿಗಳ ಸಂಖ್ಯೆ	3092	14793	ನಾಲ್ಕು ಪಟ್ಟು
ಕೊಕ್‌ಬರಾಕ್ (ಆದಿವಾಸಿ ಭಾಷೆ) ಶಾಲೆಗಳು	—	895	ಸಂಪೂರ್ಣವಾಗಿ ಕಳೆದ 8 ವರ್ಷಗಳಲ್ಲಿ ಸ್ಥಾಪಿತವಾಗಿದ್ದು

ಕಾರ್ಮಿಕರಿಗಾಗಿ

ಎಡರಂಗ ಸರ್ಕಾರದ ಕಳಹದಿಯಾದ ಕಾರ್ಮಿಕರ ಜೀವನ ಉತ್ತಮಪಡಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಚಹ ಪ್ಲಾಂಟೇಶನ್, ಸಾರಿಗೆ, ಕೃಷಿ ಮುಂತಾದ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ ಪಡಿಸಲಾಗಿದೆ. ಕನಿಷ್ಠ ಕೂಲಿ ಮತ್ತು ಇತರ ಕಾರ್ಮಿಕ ಕಲ್ಯಾಣ ಶಾಸನಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲು ಕಾರ್ಮಿಕ ಇಲಾಖೆಯನ್ನು ಬೆಳೆಸಿ ಪುನಃ ಸಂಘಟಿಸಲಾಗಿದೆ.

ಎಲ್ಲಾ ಸಾಧ್ಯವಿರುವ ಸಾಮಾಜಿಕ ಉತ್ಪಾದಕಾ ಚಟುವಟಿಕೆಗಳನ್ನು "ಸಹಕಾರಿ" ಗಳಾಗಿ ಸಂಘಟಿಸಿ, ಇವುಗಳಿಗೆ ಸಹಕಾರಿ ಮತ್ತಿತರ ಬ್ಯಾಂಕುಗಳಿಂದ ವಿಸ್ತೃತ ರೂಪದಲ್ಲಿ ಸಾಲ, ಸಹಾಯ ಸಿಗುವಂತೆ ಏರ್ಪಾಡು ಮಾಡಲಾಗಿದೆ ಹಾಲು ಉತ್ಪಾದಕರ ಸಹಕಾರಿ, ಮೀನುಗಾರರಸಹಕಾರಿ ತರಕಾರಿಮಾರಾಟಗಾರರ ಸಹಕಾರಿ ಕೆಲವು ಉದಾಹರಣೆಗಳು. ಇವುಗಳ ಉತ್ಪಾದನೆಗಳನ್ನು ಮಾರಾಟ ಮಾಡಲು ಹಲವು ಮಾರಾಟ ಸಹಕಾರಿಗಳನ್ನು ರಚಿಸಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಸುಮಾರು 5 ಚಹ ಎಸ್ಟೇಟ್‌ಗಳನ್ನು ಕಾರ್ಮಿಕರ ಸಹಕಾರಿ ಯಾಗಿ ನಡೆಸಲಾಗುತ್ತಿದೆ. ರಾಜ್ಯದಲ್ಲಿ ಕೃಷಿಉತ್ಪಾದನೆ ಹೆಚ್ಚಿಸಲು ಎಲ್ಲಾಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಖ್ಯವಾಗಿ ನೀರು ಪೂರೈಕೆ, ನೆರೆ ನಿಯಂತ್ರಣ ಕ್ರಮಗಳಿಗೆ ಆದ್ಯತೆ ನೀಡಲಾಗಿದೆ. ಜನಪರವಾಗಿರುವ ಅರಣ್ಯೀಕರಣ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಕೃಷಿ ಉತ್ಪಾದನೆ ಒಂದೂವರೆ ಪಟ್ಟು ಏರಿದೆ.

ಹಳ್ಳಿಯ ಬಡವರಿಗಾಗಿ

ರಾಜ್ಯ ಗ್ರಾಮೀಣ ಉದ್ಯೋಗ ಯೋಜನೆ (SREP), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂಹೀನ ಉದ್ಯೋಗ ಕಾರ್ಯಕ್ರಮ, ಕೂಲಿಗಾಗಿ ಕಾಳು ಮತ್ತಿತರ ಯೋಜನೆಗಳನ್ನು ಎಚ್ಚರಿಕೆಯಿಂದ ಜಾರಿಗೆ ತರುವ ಮೂಲಕ ಲಕ್ಷಗಟ್ಟಲೆ ಹಳ್ಳಿಯ ಬಡವರಿಗೆ ವರ್ಷಪೂರ್ತಿ ಉದ್ಯೋಗ ಒದಗಿಸುವುದಲ್ಲದೆ, ಹಳ್ಳಿಗಳಲ್ಲಿ ಹಲವು (ರಸ್ತೆ ಇತ್ಯಾದಿ) ಸಂಪತ್ತುಗಳನ್ನು ನಿರ್ಮಿಸಲಾಗುತ್ತಿದೆ. ಬ್ಯಾಂಕಿಂಗ್ ಸೇವೆಯ ವಿಸ್ತರಣೆ, ಸಹಕಾರಿಗಳ ರಚನೆ, ಮತ್ತು ಕೃಷಿ ಉಪಕರಣ ಮತ್ತು ವಸ್ತುಗಳಿಗೆ ಸಹಾಯಧನದಿಂದ ಬಡಜನರ ಸಾಲದ ಹೊರೆಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಲಾಗಿದೆ. ಮಧ್ಯಾಹ್ನ ಊಟದ ವ್ಯವಸ್ಥೆಯಿಂದ ಮತ್ತು ಇತರ ಕ್ರಮಗಳಿಂದ ಶಾಲೆ ಬಿಡುವ ಮಕ್ಕಳ ಸಂಖ್ಯೆ ಕಡಿಮೆಯಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣವಾಗಿದೆ. ಈ ಎಲ್ಲಾ ಯೋಜನೆಗಳಲ್ಲಿ ಗ್ರಾಮ ಪಂಚಾಯತುಗಳ ಚುನಾಯಿತ ನಾಯಕರ ಮೂಲಕ ಜನರ ಸಕ್ರಿಯ ಪಾಲು ಎಡರಂಗದ ವಿಶಿಷ್ಟ ಸಾಧನೆ. ಸರ್ಕಾರಿ ಉದ್ಯೋಗಾವಕಾಶಗಳು ದ್ವಿಗುಣಗೊಂಡಿವೆ. ರಾಜ್ಯದಲ್ಲಿ ಕೈಗಾರಿಕೀಕರಣಕ್ಕೂ ಮಹತ್ವ

(6ನೇ ಪುಟ ನೋಡಿ)

ಜನಪರ ಅರಣ್ಯ ಯೋಜನೆ

ಎಡರಂಗ ಸರ್ಕಾರದ ಅರಣ್ಯ ಇಲಾಖೆಯ ಯೋಜನೆಗಳು ಮುಖ್ಯವಾಗಿ ಮಣ್ಣು ಮತ್ತು ನೀರು ಸಂರಕ್ಷಣೆಯೊಂದಿಗೆ ಅರಣ್ಯಗಳನ್ನು ಕೈಗಾರಿಕಾ, ವಾಣಿಜ್ಯ ಮತ್ತು ಮನೆ ಉಪಯೋಗಗಳಿಗೆ ಬೇಕಾಗುವಂತೆ ಬೆಳೆಸುವುದು, ಅರಣ್ಯಗಳಲ್ಲಿ ವಾಸಿಸುವ ಜನರ ಹಿತರಕ್ಷಣೆ, ಅರಣ್ಯ ಪ್ರದೇಶಗಳಿಗೆ ಸಂಚಾರ ಸೌಲಭ್ಯದ ಬೆಳವಣಿಗೆ ಉದ್ದೇಶ ಹೊಂದಿವೆ.

ಈ 8 ವರ್ಷಗಳಲ್ಲಿ ಬೇರೆ ಬೇರೆ ಯೋಜನೆಗಳಲ್ಲಿ ಸುಮಾರು 51899 ಹೆಕ್ಟೇರುಗಳಷ್ಟು ಪ್ಲಾಂಟೇಶನ್‌ಗಳನ್ನು ಸ್ಥಾಪಿಸಲಾಗಿದೆ. ಸಾಮಾಜಿಕ ಅರಣ್ಯ ಯೋಜನೆಯ ಅನ್ವಯ ರೈತರು, ಪಂಚಾಯತುಗಳ ಜಾಗದಲ್ಲಿ ಮರಗಳನ್ನು ಬೆಳೆಸುವ ಕಾರ್ಯಕ್ರಮಗಳಲ್ಲಿ ಸುಮಾರು 5488 ಹೆಕ್ಟೇರು ಅರಣ್ಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಿಂದ 20.150 ಕುಟುಂಬಗಳಿಗೆ ಪ್ರಯೋಜನವಾಗಿದೆ

ಝೂಮಿಯಾ ಎಂಬ ಆದಿವಾಸಿಗಳ "ಝೂಮ" ಕೃಷಿ ಪದ್ಧತಿ ಗಮನಾರ್ಹ ಪ್ರಮಾಣದಲ್ಲಿ ಅರಣ್ಯ ನಾಶ, ಮಣ್ಣು ಸವೆತಕ್ಕೆ ಕಾರಣವಾಗಿರುವುದರಿಂದ, ಈ ಆದಿವಾಸಿ ಕುಟುಂಬಗಳ ಪುನರ್ವಸತಿಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಸುಮಾರು 3310 ಕುಟುಂಬಗಳು ಈ ಕಾರ್ಯಕ್ರಮಗಳ ಪ್ರಯೋಜನ ಪಡೆದಿವೆ. ಅರಣ್ಯ ಪ್ರದೇಶಗಳಿಗೆ ರಸ್ತೆ ನಿರ್ಮಿಸುವ ಕಾರ್ಯಕ್ರಮವನ್ನು ವಿವಿಧ ಯೋಜನೆಗಳ (ಕೂಲಿಗಾಗಿ ಕಾಳು ಇತ್ಯಾದಿ) ಮೂಲಕ ಕೈಗೊಳ್ಳಲಾಗಿದೆ.

ಚರಿತ್ರಾರ್ಹ ಮಹತ್ವದ

ಸೋವಿಯತ್ ಕಮ್ಯುನಿಸ್ಟ್ ಪಕ್ಷದ 27ನೇ ಸಮ್ಮೇಳನ

ಸೋವಿಯತ್ ಕಮ್ಯುನಿಸ್ಟ್ ಪಕ್ಷದ 27 ನೇ ಸಮ್ಮೇಳನ ಫೆಬ್ರವರಿ 25ರಿಂದ ಮಾರ್ಚ್ 6ರ ವರೆಗೆ ಮಾಸ್ಕೋ ನಗರದಲ್ಲಿ ಸೇರಿತ್ತು. ಅದು ಚರಿತ್ರಾರ್ಹ ಸಮಾವೇಶವಾಗಿತ್ತು.

ಅದು ರಷ್ಯಾ ದೇಶಕ್ಕಷ್ಟೇ, ಕಮ್ಯುನಿಸ್ಟ್ ರಾಷ್ಟ್ರಗಳಿಗಷ್ಟೇ ಸೀಮಿತಗೊಂಡಿಲ್ಲ, ಶಾಂತಿಗಾಗಿ ಮತ್ತು ಯುದ್ಧಕ್ಕೆ ವಿರೋಧವಾಗಿರುವ ಎಲ್ಲಾ ಜನರಿಗೂ ಅದು ಚರಿತ್ರಾರ್ಹವಾಗಿತ್ತು ಎಂದು ಪಿ. ಬಿ. ಸದಸ್ಯರಾದ ಹರಕಿಶನ್‌ಸಿಂಗ್ ಸುರ್ಜಿತ್ ಅವರು ಅಭಿಪ್ರಾಯ ವ್ಯಕ್ತಮಾಡಿದ್ದಾರೆ ಸಿ ಪಿ ಐ. (ಎಂ) ಪರವಾಗಿ ಈ ಸಮ್ಮೇಳನಕ್ಕೆ ಬಸವಪುನ್ನಯ್ಯನವರ ಜೊತೆಯಲ್ಲಿ ಸುರ್ಜಿತ್ ಅವರೂ ಸೌಹಾರ್ದ ಪ್ರತಿನಿಧಿಯಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಿ ಪಿ ಐ. (ಎಂ) ಪರವಾಗಿ ಹಾರ್ದಿಕ ಅಭಿನಂದನೆ ಸಲ್ಲಿಸಿದ್ದರು.

ಈ ಸಮ್ಮೇಳನದ ನಿರ್ಣಯಗಳು ಜಗತ್ತಿನ ಎಲ್ಲಾ ಪ್ರಚಾರ ಸಾಧನಗಳಲ್ಲೂ ಮಹತ್ವದ ಸ್ಥಾನ ಪಡೆದಿರುವುದಲ್ಲದೆ ಕಮ್ಯುನಿಸ್ಟ್ ವಿರೋಧಿಯಾದ ಸಾಮ್ರಾಜ್ಯಶಾಹಿ ಪ್ರಚಾರ ಸಾಧನಗಳೂ ಕೂಡ ರಷ್ಯದ ಕಮ್ಯುನಿಸ್ಟ್ ಪಕ್ಷ ಮತ್ತು ಪಕ್ಷದ ಕಾರ್ಯದರ್ಶಿ ಮೈಖೆಲ್ ಗೋರ್ಬಚೇವ್ ಅವರು ವಿಶ್ವಶಾಂತಿಗಾಗಿ ಮತ್ತು 2,000ನೇ ಇಸವಿಯಷ್ಟೊತ್ತಿಗೆ ಅಣ್ವಸ್ತ್ರಗಳನ್ನು ನಿರ್ನಾಮ ಮಾಡುವ ಧೈರ್ಯದ ಹೆಜ್ಜೆಯನ್ನು ಸ್ವಾಗತಿಸಿವೆ.

ಈ ಸಮ್ಮೇಳನ ಸೋವಿಯತ್ ದೇಶದ ಜೀವನದಲ್ಲಿ ಅಷ್ಟೇ ಅಲ್ಲ ಇಡೀ ಜಗತ್ತಿಗೇ ಹೊಸ ಮಾರ್ಗದರ್ಶನ ನೀಡಲಿದೆಂದೂ 21ನೇ ಶತಮಾನಕ್ಕೆ ಕಾಲಿರಿಸುವಾಗ ಸೋವಿಯತ್ ದೇಶ ಹೇಗೆ ಕಾಣಬಹುದು, ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಸಮತಾವಾದದ ಪ್ರತಿಬಿಂಬ ಮತ್ತು ಅದರ ಸ್ಥಾನ ಹಾಗೆಯೇ ಮಾನವ ಜನಾಂಗದ ಭವಿಷ್ಯ ಹೇಗಿರಬಹುದು ಎಂಬುದನ್ನೆಲ್ಲ ಚರ್ಚೆ ಮಾಡಲಾಗುವುದೆಂದು ಗೋರ್ಬಚೇವ್ ಅವರು ತಮ್ಮ ವರದಿಯನ್ನು ಪ್ರಾರಂಭಿಸಿದ್ದಾರೆ. ರಷ್ಯಾ ದೇಶ ಚಲಿಸುತ್ತ ಬಂದ ದಾರಿ, ಅದರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಾಧನೆಗಳೆಲ್ಲ, ಮಾರ್ಕ್ಸ್‌ವಾದ-ಲೆನಿನ್‌ವಾದದ ಜೀವ ಶಕ್ತಿಯನ್ನು ದೃಢಪಡಿಸಿ, ಸೋವಿಯತ್ ಸಮಾಜದಲ್ಲಿ ಅಳವಡಿಸಲಾದ ಸಮತಾವಾದದ ಅಪ್ರತಿಮ ಸಾಮರ್ಥ್ಯವನ್ನು ಪ್ರದರ್ಶಿಸಿದೆಂದೂ ಅಷ್ಟು ವರ್ಷಗಳ ನಮ್ಮ ಸಾಧನೆಯಿಂದಾಗಿ ನಾವು ಹೆಮ್ಮೆ ಪಡುತ್ತಿರುವಾಗಲೇ ನಮ್ಮ ರಾಜಕೀಯ ಮತ್ತು ಕ್ರಿಯಾತ್ಮಕ ರಂಗದಲ್ಲಿ ನಾವು ಸಾಧಿಸಬೇಕಾಗಿರುವುದು ಬಹಳವಿದೆಂದೂ ಹೇಳಿದರು.

ನಮ್ಮ ದೇಶದೊಳಗಿನ ಆರ್ಥಿಕ-ಸಾಮಾಜಿಕ ಸಕಾರಾತ್ಮಕ ಬೆಳವಣಿಗೆಗಳನ್ನು ಸರಿಪಡಿಸಿಕೊಳ್ಳುತ್ತಿರುವಂತೆಯೇ ಆಂತರಿಕವಾಗಿಯೂ ಅಂತರರಾಷ್ಟ್ರೀಯವಾಗಿಯೂ ಸಂಕ್ರಾಂತಿಯ ಕಾಲ ಸನ್ನಿಹಿತವಾಗಿದೆಂದೂ, ಆಧುನಿಕ ಜಗತ್ತು ತುಂಬ ತೊಡಕಿನಲ್ಲಿ ಸಿಕ್ಕಿಕೊಂಡಿದೆಂದೂ, ಆಳವಾದ ಬದಲಾವಣೆ, ಆತುರತೆ ಹಾಗೂ ಅಪೇಕ್ಷೆಗಳಿಂದ ಕೂಡಿದೆಂದೂ ಹೇಳಿದರು.

ಮಹಾ ಅಕ್ಟೋಬರ್ ಕ್ರಾಂತಿಯು 20 ನೆಯ ಶತಮಾನದ ಸ್ವರೂಪವನ್ನು ನಿರ್ಧರಿಸಿದೆ ಎಂದೂ, ನಮ್ಮ ಬೆಳವಣಿಗೆ ಸಮತಾವಾದದ ಜೊತೆಯಲ್ಲಿ ಗುರ್ತಿಸಲಾಗಿದೆಂದೂ, ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಆರ್ಥಿಕವಾಗಿ, ಬೆಳೆದಿರುವ ವಿಜ್ಞಾನದಲ್ಲಿ ಮುಂದುವರಿದಿರುವ, ರಾಜಕೀಯವಾಗಿಯೂ ಸೈನಿಕ ಶಕ್ತಿಯಲ್ಲೂ ವಿಶ್ವಾಸಕ್ಕೆ ಪಾತ್ರವಾದ ಜಗತ್ತಿನ ಸಮತಾವಾದ ಬಲಿಷ್ಠ ಶಕ್ತಿಯಾಗಿದೆ. ಜಗತ್ತಿನ ಒಂದನೆ ಮೂರಾಂಶ ಭಾಗದಲ್ಲಿ ಸುಲಿಗೆಗಾರರಿಲ್ಲದ, ಶೋಷಿತರಿಲ್ಲದ, ಜನರದ್ದೇ ಅಧಿಕಾರ ಇರುವ ಸಮತಾವಾದಿ ಜಗತ್ತು ಸ್ಥಾಪಿತವಾಗಿದೆ. ಸಮಾಜದ ಆ ರೀತಿಯ ಬೆಳವಣಿಗೆ ವಸಾಹತುಶಾಹಿ ವಿರುದ್ಧ ಕ್ರಾಂತಿಯಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಗಳಲ್ಲಿ, ಹಲವಾರು ಸ್ವತಂತ್ರ ದೇಶಗಳು ಹುಟ್ಟಿಕೊಳ್ಳುವಲ್ಲಿ ನಿಕಟ ಸಂಬಂಧ ಹೊಂದಿಕೊಂಡಿದೆಂದೂ ಅವರು ಹೇಳಿ ಸ್ವಾತಂತ್ರ್ಯ ಪಡೆದ ನಂತರ ಆ ದೇಶಗಳು ತಮ್ಮ ಆರ್ಥಿಕವಾಗಿ ಹಿಂದುಳಿದಿರುವಿಕೆಯಿಂದ, ಬಡತನದಿಂದ ಗುಲಾಮಗಿರಿಯಲ್ಲಿದ್ದಾಗಿನ ದಾರುಣ ಪರಿಸ್ಥಿತಿಯಿಂದ ಪಾರಾಗಲು ಶತಪ್ರಯತ್ನ ನಡೆಸುತ್ತಿದ್ದಾರೆ, ಸಾಮ್ರಾಜ್ಯಶಾಹಿಗಳ ತುಳಿತಕ್ಕೊಳಗಾದ ಆ ಜನ ಇಂದು ಚರಿತ್ರೆ ಬರೆಯುತ್ತಿದ್ದಾರೆಂದೂ ಹೇಳಿದರು.

ಹಳೇ ವಸಾಹತುಶಾಹಿಗಳಿಂದ ವಿಮೋಚನೆಗೊಂಡ ದೇಶಗಳು ಬಂಡವಾಳಶಾಹಿ ದೇಶಗಳಿಗೆ ಬಲವಾದ ಪೆಟ್ಟು ಕೊಟ್ಟವೆ. ಅದರೂ ಕೂಡ ರಾಜಕೀಯ ಕುತಂತ್ರ, ಒತ್ತಡ ಮತ್ತು ಮೋಸಗಾರಿಕೆಯಿಂದ ಹಲವಾರು ಸಲ ಸಾಮ್ರಾಜ್ಯಶಾಹಿಗಳು ಸ್ವತಂತ್ರ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ದೇಶಗಳ ಮೇಲೆ ಆರ್ಥಿಕ ಅವಲಂಬನೆ ಉಳಿಸಿಕೊಂಡಿದೆ. ಜಗತ್ತಿನ ಹೆಚ್ಚಿನ ಪ್ರದೇಶಗಳಲ್ಲಿ ಅದು ಹಲವಾರು ಸಂಕಷ್ಟಗಳನ್ನೊಡ್ಡಿ, ನಿರಕ್ಷರತೆ, ಬಡತನ, ಹಸಿವು, ಅನಾರೋಗ್ಯಗಳಿಂದ ಕೋಟ್ಯಾವಧಿ ಜನ ನರಳುವಂತಾಗಿದೆಂದೂ ಹೇಳಿದರು ಮುಂದುವರಿದ ನಾಗರಿಕ ಜನಾಂಗಕ್ಕೆ ನಾಚಿಕೆಯುಂಟು ಮಾಡುವ ಸಂಗತಿ ಇದು. ಇದಕ್ಕೆಲ್ಲ ಸಾಮ್ರಾಜ್ಯಶಾಹಿಗಳೇ ಅಪರಾಧಿಗಳು. ಲ್ಯಾಟಿನ್ ಅಮೇರಿಕ, ಅರೇಬಿಯನ್ ರಾಷ್ಟ್ರಗಳ ಹಾಗೆಯೇ ಇತರ ದೇಶಗಳ ಸುಲಿಗೆಯಿಂದಲೇ ಅಮೇರಿಕದ ಸಾಮ್ರಾಜ್ಯಶಾಹಿ ಮೆರೆಯುತ್ತಿದೆ.

ಅಭಿವೃದ್ಧಿ ಗೊಳ್ಳುತ್ತಿರುವ ದೇಶಗಳ ಸಮಸ್ಯೆ ಜಗತ್ತಿನ ಪ್ರಶ್ನೆಯಾಗಿ ಬೆಳೆದಿದೆ. ಏಶಿಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕದಲ್ಲಿಯ ಜಗಳಗಳಿಗೆಲ್ಲಾ ಇದೇ ಮುಖ್ಯ ಕಾರಣವಾಗಿದೆ. ಅವುಗಳೆಲ್ಲ "ಮಾಸ್ಕೋ ಕೈವಾಡವೇ" ಕಾರಣವೆಂದು ಸಾಮ್ರಾಜ್ಯಶಾಹಿಗಳು ಹೇಳುತ್ತಿದ್ದರೂ, ಮತ್ತೆ ಗುಲಾಮಗಿರಿ ಪದ್ಧತಿ ಮೂಲಕ ಇಡೀ ಜಗತ್ತಿನ ಮೇಲೆ ತಮ್ಮ ಪ್ರಭುತ್ವ ಹೇರುವ ದುರುದ್ದೇಶ ಹೊಂದಿದೆಂಬ ಸಂಗತಿ ನಿಜವಾಗಿದೆಂಬುದನ್ನು ತೋರ್ಪಡಿಸುತ್ತದೆಂದು ಹೇಳಿದರು. ಸಾಮ್ರಾಜ್ಯಶಾಹಿಗಳ ಒತ್ತಡದಿಂದಾಗಿ ಈ ದೇಶಗಳು ಅಭಿವೃದ್ಧಿ ಗೊಳ್ಳುತ್ತಿಲ್ಲ, ಸಾಮ್ರಾಜ್ಯಶಾಹಿಗಳು ಕೊಡಮಾಡಿದ ಸಾಲದ ಮರುಪಾವತಿಯಿಲ್ಲ, ಅಂತರರಾಷ್ಟ್ರೀಯ ಪರಿಸ್ಥಿತಿಯ ಮೇಲೆ ಅವು ಆರ್ಥಿಕ-ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನುಂಟು ಮಾಡುತ್ತಿವೆ, ಈ ರಾಷ್ಟ್ರಗಳ ಸುಲಿಗೆಯಿಂದಗಳಿಸಿದ ಲಾಭದಿಂದಲೇ ಅಮೇರಿಕ ಆಧುನಿಕ ಶಸ್ತ್ರಗಳ ಮೂಲಕ ಯುದ್ಧ ತಯಾರಿ ನಡೆಸುತ್ತಿದೆ. ಸ್ವತಂತ್ರ ದೇಶಗಳನ್ನು ಬೆದರಿಸುತ್ತಿದೆ. ಮೂರನೇ ಮಹಾಯುದ್ಧದ ಬೀತಿಯನ್ನೆಸೆಯುತ್ತಿದೆಂಬುದನ್ನು ತಿಳಿದುಕೊಳ್ಳಬೇಕೆಂದು ಹೇಳಿದರು.

ದೇಶದಲ್ಲಿಯ ಬೆಳವಣಿಗೆ

ದೇಶದ ಆಂತರಿಕ ಬೆಳವಣಿಗೆಗಳ ಕುರಿತು ಪ್ರಸ್ತಾಪಿಸುತ್ತಾ ಮೈಖೆಲ್ ಗೋರ್ಬಚೇವ್ ಅವರು 1961ರಲ್ಲಿ ಪಕ್ಷದ ಕಾರ್ಯಕ್ರಮವನ್ನು ಅನುಷ್ಠಾನದಲ್ಲಿ ತಂದ ನಂತರ ರಾಷ್ಟ್ರೀಯ ಆರ್ಥಿಕತೆ ಏಳುಪಟ್ಟು ಹೆಚ್ಚಾಗಿದೆ. ರಾಷ್ಟ್ರೀಯ ಆದಾಯ ಶೇ. 300, ಕೈಗಾರಿಕಾ ಉತ್ಪನ್ನ ಶೇ 400, ಒಕ್ಕಲತನದ ಉತ್ಪನ್ನ ಶೇ. 70ರಷ್ಟು ಜಾಸ್ತಿಯಾಗಿದೆ ಅಲ್ಲದೆ ನಿಜವಾದ ವ್ಯಕ್ತಿಯ ಆದಾಯ ಶೇ. 150ರಷ್ಟು, ಹಾಗೆಯೇ ಜನರಿಗೆ ಪುಕ್ಕಟೆ ಆರೋಗ್ಯ ಸೇವೆ, ಶಿಕ್ಷಣ, ನಿವೃತ್ತಿ ವೇತನ, ವಿದ್ಯಾರ್ಥಿಗಳಿಗೆ ಗ್ರಾಂಟ್ ಮೊದಲಾದ ಮಾರ್ಗಗಳಿಗಾಗಿರುವ ಸಾಮಾಜಿಕ ಉಪಯೋಗದ ನಿಧಿಯಲ್ಲಿ ಶೇ 400ರಕ್ಕಿಂತ ಹೆಚ್ಚಾಗಿದೆ. ಕಳೆದ 25 ವರ್ಷಗಳಲ್ಲಿ 54 ಮಿಲಿಯ ಮನೆಗಳನ್ನು ನಿರ್ಮಿಸಲಾಗಿದೆ. ಸರ್ಕಾರ ನಿರ್ಮಿಸಿದ ಮನೆಗಳನ್ನು ಪುಕ್ಕಟೆಯಾಗಿ ಜನರಿಗೆ ಹಂಚಲಾಗುತ್ತಿದೆ.

1970ರಲ್ಲಿ ಆರ್ಥಿಕ ಬೆಳವಣಿಗೆಯ ಹಿನ್ನಡೆಯಿಂದಾಗಿ ಸಂಕಷ್ಟಗಳನ್ನೆದುರಿಸಬೇಕಾಯಿತು, ಆರ್ಥಿಕ ಬೆಳವಣಿಗೆಗುಂಟಾದ ಹಿಂಬಡತಿಗೆ ಹೊಸ ಸ್ಫೂರ್ತಿ ನೀಡಿ ಬೆಳವಣಿಗೆಯ ಕಾರ್ಯದ ಜವಾಬ್ದಾರಿಯನ್ನು ಪಕ್ಷ ಮತ್ತು ಜನತೆ ವಹಿಸಬೇಕಾಗಿದೆಂದು ಹೇಳಿದರು. ಈ ಶತಮಾನ ಮುಗಿಯುವುದರೊಳಗಾಗಿ ರಾಷ್ಟ್ರೀಯ ಉತ್ಪನ್ನವನ್ನೂ ಉತ್ಪಾದನೆಯನ್ನೂ ಎರಡರಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆಂದು ಹೇಳಿದರು ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯಿಂದಲೂ, ಸಮಾಜದ ಉತ್ಪಾದನಾ ಸಾಧನೆಗಳ ಮೂಲಭೂತ ಬದಲಾವಣೆಯಿಂದಲೂ ಈ ಗುರಿ ಸಾಧಿಸಲಾಗುವುದೆಂದು ತಿಳಿಸಿದರು. ಅದಕ್ಕಾಗಿ ರಚನೆ ಮತ್ತು ಬಂಡವಾಳ ಹೂಡುವಿಕೆಯಲ್ಲಿಯೂ, ಯಂತ್ರಗಳ ನಿರ್ಮಾಣದಲ್ಲಿಯೂ, ಎಲ್ಲಾ ಕೈಗಾರಿಗಳನ್ನು ತಾಂತ್ರಿಕವಾಗಿ ಆಧುನೀಕರಿಸುವಲ್ಲಿಯೂ ವೈಜ್ಞಾನಿಕ ಮತ್ತು ತಾಂತ್ರಿಕತೆಯ ಮಟ್ಟವನ್ನು ಹೆಚ್ಚಿಸುವಲ್ಲಿ ಹಾಗೆಯೇ ಇಡೀ ಆರ್ಥಿಕತೆಯ ನೆಲೆಗಟ್ಟನ್ನೇ ಮೇಲಕ್ಕೆತ್ತುವ ರೀತಿಯಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆಂದು ಹೇಳಿದರು

ಮುಂದಿನ 15 ವರ್ಷಗಳಲ್ಲಿ ಅಂದರೆ ಈ ಶತಮಾನ ಮುಗಿಯುವುದರೊಳಗಾಗಿ ಪ್ರತಿಯೊಬ್ಬನಿಗೂ ತನ್ನದೇ ಆದ ಮನೆ ಒದಗಿಸುವ, ಅವರ ಜೀವನ ಮಟ್ಟವನ್ನು ಇಮ್ಮಡಿಗೊಳಿಸುವ ಕಾರ್ಯ ಸಾಧಿಸುವುದಾಗಿ ಆಶ್ವಾಸನೆ ನೀಡಿದರು.

ಜನಾಂಗೀಯ ಪ್ರಶ್ನೆಯನ್ನು ನಿವಾರಿಸುವುದರಲ್ಲಿ ರಷ್ಯಾ ಕೈಗೊಂಡ ಅಗಾಧವಾದ ಕ್ರಮದ ಫಲ ಸಮತಾವಾದದ ಗೆಲುವಾಗಿದೆಂದೂ ಜಗತ್ತಿನ ನಾಗರೀಕತೆಯನ್ನು ಶ್ರೀಮಂತಗೊಳಿಸಿದೆಂದೂ, ಜನಾಂಗಗಳ ಮಧ್ಯೆ ಬಲವಾದ ಗೆಳೆತನ ಮಾಡಿ ಬಂದಿದೆಂದೂ, ರಾಷ್ಟ್ರೀಯ ಸಂಸ್ಕೃತಿ ಎಲ್ಲ ಜನರ ಮರ್ಯಾದೆ ಬಲವಾಗಿ ಬೇರೂರಿದೆಂದೂ ಹೇಳಿದರು.

ಸಮತಾವಾದಿ ಪದ್ಧತಿಯನ್ನು ಇನ್ನೂ ಪ್ರಜಾಪ್ರಭುತ್ವಗೊಳಿಸಲಿಕ್ಕೆ ಹೆಚ್ಚು ಗಮನ ಕೊಡುತ್ತ ಬಂದಿದ್ದು, ಪಕ್ಷದ ಕಾರ್ಯಕ್ರಮದ ಹೊಸ ಆವೃತ್ತಿಯಲ್ಲಿ ಜನತೆಯ ಸಮಾಜವಾದಿ ಸ್ವಂತ ಸರ್ಕಾರ ಸಿದ್ಧಾಂತವನ್ನು ಸ್ಥಿರವಾಗಿ, ಅಚಲವಾಗಿ ಮುಂದುವರಿಸುವ ಕರೆಕೊಡಲಾಗಿದೆ

ಅದಾಗಬೇಕಾದರೆ ಅಣುಯುದ್ಧದ ತಯಾರಿಯನ್ನು ಬಿಟ್ಟುಕೊಡಬೇಕು. "ರಾಜ್ಯ ರಾಜ್ಯಗಳೊಳಗಿನ ರಾಜಕೀಯ ಆರ್ಥಿಕ ವಿರೋಧಾಭಾಸಗಳನ್ನೂ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನೂ ಬಗೆಹರಿಸಲು ಯುದ್ಧದಿಂದಲೇ ಸಾಧ್ಯವೆಂಬ ತಿಳುವಳಿಕೆಯನ್ನು ಸಮತಾವಾದ ಕರಾರಿಲ್ಲದೆ ನಿರಾಕರಿಸುತ್ತದೆ. ಯಾವ ಆಯುಧಗಳಿಲ್ಲದ, ಹಿಂಸಾಚಾರವಿಲ್ಲದ ಜಗತ್ತು ನಮ್ಮ ಆದರ್ಶವಾಗಿದೆ."

ಈಗ ರೂಪಿಸಲ್ಪಟ್ಟಿರುವ ವಾಸ್ತವ ಪರಿಸ್ಥಿತಿಯಲ್ಲಿ "ಬಂಡವಾಳಶಾಹಿ ಮತ್ತು ಸಮತಾವಾದದ ಜೊತೆಯ ಮುಖಾಮುಖಿ ಶಾಂತಿಯುತ ಪೈಪೋಟಿ ಮತ್ತು ಶಾಂತಿಯುತ ಸ್ಪರ್ಧೆಯ ಮೂಲಕವೇ ಮುಂದುವರಿಯಬಹುದೆಂದು" ಗೋರ್ಬಚೇವ್ ಒತ್ತಿಹೇಳಿದರು ಕಾಲ ಕೈಮೀರುವ ಮುಂಚೆಯೇ ಶಸ್ತ್ರಾಸ್ತ್ರ ಪೈಪೋಟಿ ಬಾಹ್ಯಾಕಾಶಕ್ಕೆ ವಿಸ್ತರಿಸದಂತೆ ನೋಡಿಕೊಳ್ಳುವ ಅವಶ್ಯಕತೆಯನ್ನು ಗಮನಕ್ಕೆ ತಂದರು.

ಪ್ರತಿಯೊಂದು ದೇಶವೂ ಅಲ್ಲಿಯ ಜನರ ಅಭಿಪ್ರಾಯದಂತೆ ಸ್ವತಂತ್ರವಾದ ಅಭಿವೃದ್ಧಿ ಗೊಳ್ಳುವ ಸ್ವರೂಪ ನಿರ್ಧರಿಸುವ, ರಾಷ್ಟ್ರಗಳೊಳಗೆ ವಿಶ್ವಾಸ ಉಂಟಾಗುವ ರೀತಿಯಲ್ಲಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವಂಥ ರಾಜಕೀಯ ಕ್ರಮ ಅನುಸರಿಸಬೇಕೆಂದೂ ಕರೆಯಿತ್ತರು. ಆರ್ಥಿಕವಾಗಿ ದಿಗ್ಬಂಧನಗಳನ್ನೂ, ಪಕ್ಷಪಾತಗಳನ್ನೂ ಬಿಟ್ಟುಕೊಡಬೇಕೆಂದೂ ಸೂಚಿಸಿದರು. ಆರ್ಥಿಕ ರಕ್ಷಣೆಯ ಸಲುವಾಗಿ ವಿಶ್ವ ಸಮ್ಮೇಳನ ಕರೆಯುವ ಸೂಚನೆಯನ್ನು ಮುಂದಿಟ್ಟರು.

ಪಾರ್ಟಿ ಸದಸ್ಯರ ಜವಾಬ್ದಾರಿ

ಸೋವಿಯತ್ ಕಮ್ಯುನಿಸ್ಟ್ ಪಕ್ಷದಲ್ಲಿ 1 ಕೋಟಿ 90 ಲಕ್ಷ ಸದಸ್ಯರಿದ್ದಾರೆಂದೂ ಅದರ ಪೈಕಿ 50 ಲಕ್ಷಕ್ಕೂ ಮೇಲ್ಪಟ್ಟು ಮಹಿಳೆಯರಿದ್ದಾರೆಂದೂ ಹೇಳಿದರು ಸಮತಾವಾದದ ಅಪಾರ ಸಾಮರ್ಥ್ಯದಿಂದಲೂ, ಜನತೆಯ ಜೀವಂತ, ಕ್ರಿಯಾತ್ಮಕ ಪ್ರಯತ್ನದಿಂದಲೂ ರಷ್ಯದ ಕಮ್ಯುನಿಸ್ಟ್ ಪಕ್ಷ ತನ್ನ ಶಕ್ತಿಯನ್ನು ಗಳಿಸುತ್ತದೆಂದೂ, ಚರಿತ್ರೆಯಲ್ಲಿಯ ಜಟಿಲವಾದ ಪರಿಸ್ಥಿತಿಯಲ್ಲಿ, ಸರಿಯಾದ ಮಾರ್ಗ ಕಂಡು ಹಿಡಿದು, ಮಿಲಿಯಗಟ್ಟಲೆ ದುಡಿಯುವ ಜನರಲ್ಲಿ ಸ್ಫೂರ್ತಿ ತುಂಬಿ ಸಂಘಟಿಸುವ ಶಕ್ತಿಯನ್ನು ಲೆನಿನ್ನರ ಪಕ್ಷ ಹಲವಾರು ಸಲ ಪ್ರದರ್ಶಿಸಿದೆ. ಕ್ರಾಂತಿಯ ಸಮಯದಲ್ಲಿಯೂ, ಶಾಂತಿಯುತ ಪುನರ್ರಚನೆಯ ಕಾಲದಲ್ಲಿಯೂ, ಯುದ್ಧದ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಯುದ್ಧಾನಂತರದ ಕಷ್ಟಕರ ಕಾಲದಲ್ಲಿಯೂ ನಮ್ಮ ಶಕ್ತಿ ಪ್ರದರ್ಶಿಸಿದ್ದೇವೆ. ಭವಿಷ್ಯತ್ತಿನಲ್ಲಿ ಕೂಡ ನಮ್ಮ ಪಕ್ಷ ಅದೇ ರೀತಿ ಮಾಡುತ್ತದೆಂಬ ವಿಶ್ವಾಸ ಹೊಂದಿದೆಂದು ಹೇಳಿದರು. ●

ಪ್ರತಿನಿಧಿಗಳು

3670 ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ 5,000 ಪ್ರತಿನಿಧಿಗಳನ್ನು ಆರಿಸಲಾಗಿತ್ತು. ಇದರ ಪೈಕಿ 3827 ಪ್ರಥಮ ಸಲ ಪ್ರತಿನಿಧಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು ಶೇ 30.5 ರಷ್ಟು ಪ್ರತಿನಿಧಿಗಳು 40 ವಯಸ್ಸಿಗಿಂತ ಕಡಿಮೆಯವರು, ಶೇ. 34.7 ರಷ್ಟು 41 ರಿಂದ 50 ವಯಸ್ಸಿನವರು 60 ವರ್ಷಕ್ಕೆ ಮೇಲ್ಪಟ್ಟವರು ಶೇ 8.3. ಈ ಸಮ್ಮೇಳನದಲ್ಲಿ ಹಿಂದಿಗಿಂತಲೂ ಅತಿ ಹೆಚ್ಚು ಮಹಿಳಾ ಪ್ರತಿನಿಧಿ(ಅಂದರೆ 1352)ಗಳಿದ್ದರು. 1705 ಕಾರ್ಮಿಕರು, ಅದರಲ್ಲಿ 1375 ಪ್ರತಿನಿಧಿಗಳು, ಕೈಗಾರಿಕೆ, ನಿರ್ಮಾಣ ಮತ್ತು ಟ್ರಾನ್ಸ್‌ಪೋರ್ಟ್‌ಗಳಿಂದ, 872 ಕೃಷಿ ಕಾರ್ಮಿಕರು, 114 ವೈಜ್ಞಾನಿಕ ಕೆಲಸಗಾರರು, ಮತ್ತು, ಶಿಕ್ಷಕರು, 123 ಸೈನ್ಸ್ ಅಕಾಡೆಮಿಯ ಸದಸ್ಯರು 72 ದೇಶಿಯ ಗುಂಪುಗಳನ್ನು ಪ್ರತಿನಿಧಿಗಳು ಪ್ರತಿನಿಧಿಸಿದ್ದರು.

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ

ಕೇಂದ್ರ ಮುಂಗಡ ಪತ್ರ : 1986-87

ಬಡತನ ನಿವಾರಣೆಯ ಮುಸುಕಿನಲ್ಲಿ ಬಂಡವಾಳಶಾಹಿಗಳಿಗೆ ಕುಮ್ಮಕ್ಕು

1986-87 ರ ಮುಂಗಡ ಪತ್ರ ಕಡಿಮೆ ಕರಭಾರದ್ದಾಗಿದೆ, ಬಡತನ ನಿವಾರಣೆಗೆ ಮತ್ತು ಸಾರ್ವಜನಿಕ ರಂಗಕ್ಕೆ ಹೆಚ್ಚಿನ ಆದ್ಯತೆ ಹಾಗೂ ಸಂಪನ್ಮೂಲ ಒದಗಿಸುವಲ್ಲಿ ಕಳೆದ ವರ್ಷದ ಮುಂಗಡ ಪತ್ರಕ್ಕಿಂತ ಉತ್ತಮವಾಗಿದೆ ಎಂದು ಸಂಬಂಧಪಟ್ಟ ವರ್ತುಲಗಳಿಂದ ಭಾರೀ ಪ್ರಚಾರ ನಡೆಯುತ್ತಿದೆ. ಯಾವುದೇ ವರ್ಷದ ಮುಂಗಡ ಪತ್ರವನ್ನು ಸ್ವತಂತ್ರವಾಗಿ ಪರಿಗಣಿಸದೆ, ಅವನ್ನು ಬಿಟ್ಟು ಆರ್ಥಿಕ ನೀತಿಯೊಂದಿಗೆ ಪರಿಶೀಲಿಸಬೇಕಾಗುವುದು.

ಕಡಿಮೆ ಕರಭಾರ ?

ಈ ವರ್ಷದ ಮುಂಗಡ ಪತ್ರದಲ್ಲಿ ಕೇವಲ ರೂ 4 7 ಕೋಟಿ ಅಧಿಕ ತೆರಿಗೆ ವಿಧಿಸಲಾಗಿದ್ದು, ತೆರಿಗೆಯ ಭಾರ ಕಡಿಮೆ ಮಾಡಲಾಗಿದೆ ಎಂದು ಜನರನ್ನು ಸಮಾಧಾನ ಪಡಿಸಲಾಗುತ್ತಿದೆ. ಆದರೆ, ಹೊಸ ತೆರಿಗೆಯಲ್ಲಿ ರೂ 21 ಕೋಟಿಯಷ್ಟೇ ಶ್ರೀಮಂತರ ಆದಾಯ ಮತ್ತು ಆಸ್ತಿಗಳ ಮೇಲಿನ ಪ್ರತ್ಯಕ್ಷ ತೆರಿಗೆಯಾಗಿದ್ದು, ಉಳಿದ ರೂ 446 ಕೋಟಿಯಷ್ಟು ಜನ ಸಾಮಾನ್ಯರ ಜೀವನ ಮಟ್ಟ ಇನ್ನಷ್ಟು ಹದಗೆಡಿಸುವ ಅಪ್ರತ್ಯಕ್ಷ ತೆರಿಗೆಯಾಗಿದೆ. ಜೊತೆಗೇ, ರೈಲ್ವೆ ಮುಂಗಡ ಪತ್ರದಲ್ಲಿ ಪ್ರಯಾಣಿಕ ದರವನ್ನು ರೂ 76 ಕೋಟಿಯಷ್ಟು ಹೆಚ್ಚಿಸಿ, ಅದರ ಭಾರ ಹೆಚ್ಚಾಗಿ ಎರಡನೇ ವರ್ಗದ ಪ್ರಯಾಣಿಕರ ಮೇಲೆಯೇ ಹೇರಲಾಗಿದೆ. ಮುಂಗಡ ಪತ್ರದ ಪೂರ್ವದ ಒಂದೆರಡು ತಿಂಗಳ ಅವಧಿಯಲ್ಲಿ ಕಲ್ಲಿದ್ದಲು, ಗೊಬ್ಬರ, ಆಹಾರ ಧಾನ್ಯಗಳು, ಪೆಟ್ರೋಲಿಯಂ ಪದಾರ್ಥಗಳು, ಇತ್ಯಾದಿ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಆಡಳಿತ ನಿರ್ದೇಶನಗಳಿಂದ ಏರಿಸಿ ವರ್ಷಕ್ಕೆ ರೂ 2000 ಕೋಟಿಯಷ್ಟು ಅಪ್ರತ್ಯಕ್ಷ ತೆರಿಗೆಯ ಭಾರ ಜನಸಾಮಾನ್ಯರ ಮೇಲೆಯೇ ಹೊರಿಸಲಾಗಿದೆ. ಇಷ್ಟು ಸಾಲದೆ, ಈ ವರ್ಷ ರೂ 3650 ಕೋಟಿ ಕೊರತೆ ತೋರಿಸಲಾಗಿದೆ. ಅಂದರೆ, ಇಷ್ಟು ಮೊತ್ತದ ಹಣಸೃಷ್ಟಿ ಮಾಡಿ ಆರ್ಥಿಕ ವ್ಯವಸ್ಥೆಯಲ್ಲಿ ಸರಕಾರದ ಆಡಳಿತ ಹಾಗೂ ಅಭಿವೃದ್ಧಿಯ ವೆಚ್ಚಕ್ಕಾಗಿ ಹರಿಯಬಿಡುವುದು ಇದು ಕೂಡಾ ಜನಸಾಮಾನ್ಯರ ಮೇಲೆ ಹಣದುಬ್ಬರದ ಮೂಲಕ ಅಪ್ರತ್ಯಕ್ಷ ತೆರಿಗೆಯಾಗಿ ಪರಿಣಮಿಸುವುದು. ಅರ್ಥಾತ್ 1986-87 ರಲ್ಲಿ ಸರಕಾರದ ಹೆಚ್ಚುವರಿ ಸಂಪನ್ಮೂಲ ಸಂಗ್ರಹದಲ್ಲಿ ರೂ 21 ಕೋಟಿಯಷ್ಟೇ ಭಾರವು ಶ್ರೀಮಂತರ ಮೇಲೆ ಬೀಳುವುದು ರೂ 6172 ಕೋಟಿಯಷ್ಟು ಪರೋಕ್ಷವಾಗಿ (ರೂ 447 ಕೋಟಿ ಅಪ್ರತ್ಯಕ್ಷ ತೆರಿಗೆ, ರೂ 76 ಕೋಟಿ ರೈಲ್ವೆ ದರ ಹೆಚ್ಚಳ, ರೂ 2000 ಕೋಟಿ ಅವಶ್ಯಕ ವಸ್ತುಗಳ ಬೆಲೆ ಏರಿಕೆ, ರೂ 3650 ಕೋಟಿ ಕೃತಕ ಹಣ ಸೃಷ್ಟಿ) ದೇಶದ ಜನಕೋಟಿಯ ಮೇಲೆ, ಮುಖ್ಯವಾಗಿ ದುಡಿಯುವ ಜನರ ಮೇಲೆ, ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವ ಶೇ. 50 ರಷ್ಟು ಜನಸಂಖ್ಯೆಯ ಮೇಲೆ ಬೀಳುವುದು ಸರಕಾರದ ಬೆಲೆ ಏರಿಕೆಯ ವಿರುದ್ಧ "ಭಾರತ್ ಬಂದ್" ಮುಂತಾದ ಪ್ರತಿಭಟನೆಗಳು ನಡೆಯುತ್ತಿದ್ದರೆ, ರಾಜೀವ ಕಾಂಗ್ರೆಸ್ ಕಳೆದ ಒಂದು ವರ್ಷದಲ್ಲಿ ಅನೇಕ ಉಪಚುನಾವಣೆಗಳಲ್ಲಿ ಜನಪ್ರಿಯತೆಯನ್ನು ಕಳೆದುಕೊಳ್ಳದಿದ್ದರೆ, ಜನ ಸಾಮಾನ್ಯರ ಮೇಲೆ ಈ ವರ್ಷ ಇನ್ನೂ ಹೆಚ್ಚು ತೆರಿಗೆ ಭಾರ ಹೇರಲಾಗುತ್ತಿತ್ತು !

ತೆರಿಗೆಯ ಸಂಗ್ರಹದಲ್ಲಿ ಹೆಚ್ಚಳ ?

ಕಳೆದ ವರ್ಷ ಶ್ರೀಮಂತರ ಆದಾಯ ಆಸ್ತಿಗಳ ಮೇಲೆ, ಅವರ ನಿಯಂತ್ರಣದ ಕೈಗಾರಿಕೋದ್ಯಮಗಳ ಲಾಭದ ಮೇಲೆ ಕೆಲವು ತೆರಿಗೆಗಳನ್ನು ರದ್ದು ಮಾಡಿದುದರಿಂದ ಮತ್ತು ಕೆಲವು ತೆರಿಗೆಗಳ ದರಗಳನ್ನು ಇಳಿಸಿದುದರಿಂದ, ವರ್ಷಾಂತ್ಯದಲ್ಲಿ ಒಟ್ಟು ತೆರಿಗೆ ಸಂಗ್ರಹದಲ್ಲಿ ಶೇ 22 ರಷ್ಟು ಮತ್ತು ಆದಾಯ ತೆರಿಗೆಯಲ್ಲಿ ಶೇ 36 ರಷ್ಟು ಹೆಚ್ಚಾಗಿದೆ ಎಂದು ಅರ್ಥ ಮಂತ್ರಿಯ ಸಾಧನೆಯನ್ನು ಹಾಡಿ ಹೊಗಳಲಾಗುತ್ತಿದೆ. ಆ ಕಾರಣದಿಂದ ಈ ವರ್ಷವೂ ಆಸ್ತಿ ಆದಾಯ ತೆರಿಗೆಗಳ ಮೇಲೆ ಇನ್ನಷ್ಟು ರಿಯಾಯಿತಿಗಳನ್ನು ನೀಡಲಾಗಿದೆ. ಆದರೆ, ತೆರಿಗೆ ಸಂಗ್ರಹದ ಏರಿಕೆಯ ದರ ಎಷ್ಟು ಕಾಲ ಮುಂದುವರಿಯಬಹುದು ?

ಕಳೆದ ವರ್ಷದ ಹೆಚ್ಚುವರಿ ತೆರಿಗೆ ಸಂಗ್ರಹದಲ್ಲಿ ಕಪ್ಪು ಹಣ ಬಿಳಿಯಾದದ್ದೂ ಇದೆ. ಕಪ್ಪು ಹಣದ ಗಾತ್ರ, ವರ್ಷಕ್ಕೆ ಕನಿಷ್ಠ ರೂ 37000 ಕೋಟಿ ಮತ್ತು ಗರಿಷ್ಠ ರೂ 86000 ಕೋಟಿ ಎಂದು ಅಂದಾಜು ಮಾಡಲಾಗಿದ್ದು, ಇದಕ್ಕೆ ಹೋಲಿಸಿದರೆ ತೆರಿಗೆ ಸಂಗ್ರಹದ ಸಾಧನೆ ತೀರಾ ಗೌಣ. ಬಳಿ ಹಣದ ಮೇಲಿನ ತೆರಿಗೆ ಬಾಕಿಯೇ ರೂ 600-700 ಕೋಟಿಯಷ್ಟಾಗಿದ್ದು, ಹತ್ತು ದೊಡ್ಡ ಗುತ್ತೇದಾರ ಕೈಗಾರಿಕಾ ಕುಟುಂಬಗಳ ತೆರಿಗೆ ಬಾಕಿಯೇ ರೂ 60 ಕೋಟಿ ರೂ ಮೀರಿದೆ. ಸುಪ್ರೀಂ ಕೋರ್ಟ್ ಮತ್ತು ಹೈ ಕೋರ್ಟುಗಳಲ್ಲಿ ತೆರಿಗೆಗಳಿಗೆ ಸಂಬಂಧಿಸಿದ ಒಟ್ಟು 32000 ಮೊಕದ್ದಮೆಗಳು ಇತ್ಯರ್ಥವಾಗದೆ ನನೆಗುದಿ ಬಿದ್ದಿವೆ. ಇವುಗಳಿಗೆ ಹೋಲಿಸಿದಾಗಲೂ ತೆರಿಗೆ ಸಂಗ್ರಹ ಸಾಧನೆಯು ಗೌಣವಾಗಿದೆ. ತೆರಿಗೆಗಳ್ಳರ ವಿರುದ್ಧ ಕೆಲವು ಕಠಿಣ ಕ್ರಮ ಕೈಗೊಳ್ಳುವ ಕುರಿತು ಈಗ ಸರ್ಕಾರದ ಉನ್ನತ ಮಟ್ಟದಲ್ಲಿ ಮರು ಪರಿಶೀಲನೆ ನಡೆಯುತ್ತಿದೆ. ಕಾರಣ ಇಷ್ಟೆ, ಇಂತಹ ಶ್ರೀಮಂತ ಭೂಮಾಲೀಕರು ಆದಾಯ ತೆರಿಗೆಯಿಂದ ಹೊರಗುಳಿದಿರುವುದರಿಂದ ಶ್ರೀಮಂತ ಬಂಡವಾಳಶಾಹಿಗಳೂ ತಮ್ಮ ಆಸ್ತಿ ಆದಾಯಗಳ ಮೇಲಿನ ತೆರಿಗೆ ಭಾರ ಕಡಿಮೆಗೊಳಿಸಲು ಇನ್ನಷ್ಟು ಒತ್ತಾಯಿಸುತ್ತಿದ್ದಾರೆ !

ಸಾರ್ವಜನಿಕ ರಂಗಕ್ಕೆ ಹೆಚ್ಚು ಸಂಪನ್ಮೂಲ ?

1986-87 ರಲ್ಲಿ ಕೇಂದ್ರದ ಯೋಜನಾ ವೆಚ್ಚವು ರೂ 22300 ಕೋಟಿಯಾಗಿದ್ದು, ಮೊದಲ ವರ್ಷಕ್ಕಿಂತ (1985-87 : ರೂ 18500 ಕೋಟಿ) ಶೇ 20.5 ರಷ್ಟು ಹೆಚ್ಚಾಗಿದೆ ಮತ್ತು ಏಳನೇ ಯೋಜನೆಯ ವೆಚ್ಚದ ಶೇ 40 ರಷ್ಟು ಸಂಪನ್ಮೂಲವನ್ನು ಮೊದಲ ಎರಡು ವರ್ಷಗಳಲ್ಲಿಯೇ ಒದಗಿಸಲಾಗಿದೆ ಎಂದು ಹೊಗಳಲಾಗುತ್ತಿದೆ. ಇದು ಕೇವಲ ಅಂಕೆ ಸಂಖ್ಯೆಗಳ ಕಸರತ್ತು. ಹೇಗೆ ? 1. ಈ ವರ್ಷದ ಯೋಜನಾ ವೆಚ್ಚವು, 1984-85 ರ ಬೆಲೆಮಟ್ಟದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಕೇವಲ ಶೇ 10 ರಷ್ಟು ಹೆಚ್ಚಾಗಿರುತ್ತದೆ. 2. ಹಿಂದಿನ ವರ್ಷದಲ್ಲಿ ಯೋಜನಾ ವೆಚ್ಚ ಬಹಳ ಕಡಿಮೆ ಮಟ್ಟದಲ್ಲಿದ್ದು ಸರಕಾರ ಸಾರ್ವಜನಿಕರ ಕಟು ಟೀಕೆಗೆ ಗುರಿಯಾಗಿತ್ತು. ಅದನ್ನು ಸ್ವಲ್ಪ ನಿವಾರಿಸಿಕೊಳ್ಳಲು ಈ ಹೊಸ ಮುಖವಾಡ. 3. ಸಾರ್ವಜನಿಕ ರಂಗದ ವಿಸ್ತರಣೆಯಾಗದೆ, ಖಾಸಗೀ ರಂಗ ಬೆಳೆಯಲಾರದೆಂದು ಬೆಹಲಿಯ ಹೊಸ ಆಡಳಿತದಾರರಿಗೆ ಈಗ ಸ್ವಲ್ಪ ಮನವರಿಕೆಯಾಗಿರಬೇಕು.

ಮುಖ್ಯವಾಗಿ, ಸಾಂಕೇತಿಕವಾಗಿ ದೊಡ್ಡ ಗಾತ್ರದ ಸಾರ್ವಜನಿಕ ರಂಗವು ಆರನೇ ಯೋಜನೆಯಲ್ಲಿ ಇನ್ನೂ ಅಪೂರ್ಣವಾಗಿ ಉಳಿದ ಅಭಿವೃದ್ಧಿ ಕಾರ್ಯಗಳಲ್ಲಿಯೇ ಕೇಂದ್ರೀಕೃತವಾಗಿದ್ದು, ಹೊಸ ಅಭಿವೃದ್ಧಿ ಕಾರ್ಯಗಳನು ಕೈಗೊಳ್ಳುವ ಸಂಭವವಿಲ್ಲ. ಪರಿಣಾಮವಾಗಿ, ರೈಲ್ವೆ, ವಿದ್ಯುತ್, ನೀರಾವರಿ, ಉಕ್ಕು, ಕಲ್ಲಿದ್ದಲು, ತೈಲ, ಗೊಬ್ಬರ ಇತ್ಯಾದಿ ಮೂಲಭೂತ ಕೈಗಾರಿಕೆಗಳು ಸಂಪನ್ಮೂಲಗಳ ತೀವ್ರ ಕೊರತೆಯಿಂದಾಗಿ ಬಹಳ ಹಿಂದುಳಿಯುವುವು. ಯೋಜನೆಯಲ್ಲಿ ನಿರೀಕ್ಷಿಸಿದ ಆರ್ಥಿಕ ಅಭಿವೃದ್ಧಿ, ಕೃಷಿ-ಕೈಗಾರಿಕೋತ್ಪಾದನೆ ಮತ್ತು ಉದ್ಯೋಗಾವಕಾಶ ಸಾಧ್ಯವಿಲ್ಲ.

ಯೋಜನಾ ವೆಚ್ಚಕ್ಕಾಗಿ ಸಾರ್ವಜನಿಕ ರಂಗದ ಉತ್ಪಾದನೆಗಳ ಬೆಲೆ ಏರಿಸುವುದರಿಂದ, ಯೋಜನೆಯ ವೆಚ್ಚ ಇನ್ನಷ್ಟು ಹೆಚ್ಚುವುದು. ಅದ ಕ್ಕ್ರತ್ತೆಗೆಯು ಈಗಾಗಲೇ ಒಟ್ಟು ಶೇಕಡ ಶೇ 85 ರಷ್ಟು ಗರಿಷ್ಠ ಮಟ್ಟಕ್ಕೇರಿದೆ. ಕೊರತೆ ಹಣ ಸೃಷ್ಟಿಯು 6ನೇ ಯೋಜನೆಯಲ್ಲಿ ಪೂರ್ವ ನಿಯೋಜಿತ ರೂ 5000 ಕೋಟಿಯಿಂದ ರೂ 13000 ಕೋಟಿಗೇರಿದೆ. 7ನೇ ಯೋಜನೆಯಲ್ಲಿ ಕೊರತೆ ಹಣ ಸೃಷ್ಟಿ ರೂ 14000 ಕೋಟಿ ಎಂದು ಅಂದಾಜು ಮಾಡಲಾಗಿದ್ದು, ಮೊದಲ ಎರಡು ವರ್ಷಗಳಲ್ಲಿಯೇ ರೂ 10,000 ಕೋಟಿಗೇರಲಿದ್ದು, ಅಂತ್ಯದಲ್ಲಿ ರೂ 25000 ಕೋಟಿ ರೂ ಮೀರಬಹುದು. ಸಾರ್ವಜನಿಕ ಸಾಲ ಬಡ್ಡಿ ಸಹಿತ ಮರುಪಾವತಿ ಮಾಡುವ ವೆಚ್ಚದ ಭಾರ ಹೊಸ ಸಾಲದ ಶೇ 40 ಕ್ಕೇರಿದೆ. ವಿದೇಶಿ ಸಾಲ ಬಡ್ಡಿ ಸಹಿತ ಮರುಪಾವತಿಯ ಭಾರ, ದೇಶದ ಒಟ್ಟು ರಫ್ತು ಗಳಿಕೆಯ ಶೇ 20 ಕ್ಕೇರಿದೆ. ದೇಶದ ರಫ್ತು ಸ್ಥಗಿತಗೊಂಡು, ಆಮದು ಅಧಿಕಗೊಂಡು, ವಿದೇಶಿ ವ್ಯಾಪಾರದಲ್ಲಿ ಸಧ್ಯ ರೂ 10000 ಕೋಟಿಯಷ್ಟು ಕೊರತೆ ಕಾಣಿಸಿಕೊಂಡಿದೆ. ಸಾರ್ವಜನಿಕ ರಂಗಕ್ಕೆ ಹೆಚ್ಚು ಸಂಪನ್ಮೂಲ ಒದಗಿಸಲಾಗಿದೆ ಎಂಬ ಅಂಕೆ ಸಂಖ್ಯೆಗಳ ಕಸರತ್ತು ಹೆಚ್ಚು ಕಾಲ ನಡೆಯಲಾರದು.

ಬಡತನ ನಿವಾರಣೆಗೆ ಹೆಚ್ಚು ಸಂಪನ್ಮೂಲ ?

1986-87 ರಲ್ಲಿ ಬಡತನ ನಿವಾರಣೆಗೆ ಹಿಂದಿನ ವರ್ಷಕ್ಕಿಂತ ಶೇ 65 ರಷ್ಟು ಹೆಚ್ಚು ಸಂಪನ್ಮೂಲ ಒದಗಿಸಲಾಗಿದೆ ಎಂದು ಹೇಳಿಕೊಳ್ಳಲಾಗಿದೆ. ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯಲ್ಲಿ ಬಡತನ ಹೆಚ್ಚುತ್ತಲೇ ಇರುವುದರಿಂದ ಅದರ ನಿವಾರಣೆ ಸಾಧ್ಯವೇ ಇಲ್ಲ. ಏನಿದ್ದರೂ ಕೆಲವು ಪರಿಹಾರ ಕಾರ್ಯಕ್ರಮಗಳು ಅಷ್ಟೆ. ಉದಾ: ಹಿಂದಿನ ಇಂದಿರಾ 20 ಅಂಶಗಳ ಮತ್ತು ಇಂದಿನ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು. ಬಡತನ ಪರಿಹಾರಕ್ಕೆ ಹೆಚ್ಚು ಸಂಪನ್ಮೂಲ ಒದಗಿಸಬೇಕೆನ್ನುವುದು ಪ್ರಜಾಸತ್ತಾತ್ಮಕ ಬೇಡಿಕೆಯೇ ಆಗಿದೆ. ಕಳೆದ ವರ್ಷ ರಾಜೀವ್ ಸರಕಾರ ಹೆಚ್ಚು ಜನಪ್ರಿಯತೆ ಪಡೆದಿದ್ದು, ಬಡತನ ಪರಿಹಾರಕ್ಕೆ ಕಡಿಮೆ ಸಂಪನ್ಮೂಲ ಒದಗಿಸಲಾಗಿತ್ತು. ಈ ವರ್ಷ ಜನಪ್ರಿಯತೆ ಇಳಿಮುಖವಾದುದರಿಂದ ಸ್ವಲ್ಪ ಹೆಚ್ಚು ಸಂಪನ್ಮೂಲ ಈ ಕ್ಷೇತ್ರಕ್ಕೆ ನೀಡಿರುವುದು ನಿಜ. ಆದರೆ, ಇದರಲ್ಲಿ ಬಡವರಿಗೆ ಎಷ್ಟು ಸಲ್ಲುವುದು, ಮಧ್ಯವರ್ತಿಗಳಾದ ಲಾಭ ಬಡುಕರಿಗೆ ಎಷ್ಟು ಸಲ್ಲುವುದು ಎಂಬುದು ವಿವಾದಾಸ್ಪದವಾಗಿದೆ. ಮೀಸಲಾಗಿರಿಸಿದ ಎಷ್ಟು ಹಣ ಬಡವರಿಗೆ ಸೇರುವುದೆಂದು ಊಹಿಸಿದರೂ, ಪರಿಹಾರ ಬಡತನ ರೇಖೆಯ ಕೆಳಗಿನ ಕುಟುಂಬಗಳಿಗೆ ತಲಾ ವರ್ಷಕ್ಕೆ ರೂ 40 ದೊರೆಯಬಹುದು. ಆದರೆ ಕನಿಷ್ಠ ತಲಾ ವರ್ಷಕ್ಕೆ ರೂ. 1200- ತಿಂಗಳಿಗೆ ರೂ. 100 ಆದರೂ ಬಡಕುಟುಂಬಗಳಿಗೆ ತಲುಪಬೇಕಾದರೆ, ಈ ವರ್ಷಕ್ಕೆ ರೂ, 10000 ಕೋಟಿಯಷ್ಟಾದರೂ ಖರ್ಚು ಮಾಡಬೇಕಾಗುವುದು. ಬದಲು, ವರ್ಷ ಈ ಕಾರ್ಯಕ್ರಮಗಳಿಗೆ ಕೇವಲ ರೂ. 1850 ಕೋಟಿ ಸಂಪನ್ಮೂಲ ಒದಗಿಸಲಾಗಿದೆ.

ಅಪ್ರತ್ಯಕ್ಷ ತೆರಿಗೆ, ಕೊರತೆ ಹಣ ಸೃಷ್ಟಿ, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಗಳಿಂದ 1986-87 ರಲ್ಲಿ 6172 ಕೋಟಿಯಷ್ಟು ಹೆಚ್ಚುವರಿ ಹಣ ಜನಸಾಮಾನ್ಯರಿಂದ ವಸೂಲಿ ಮಾಡಿ, ಅವರಿಗೆ ಕೇವಲ ರೂ 612 ಕೋಟಿ ಹೆಚ್ಚುವರಿ ಪರಿಹಾರ ನೀಡುವುದೆಂದರೆ, ಸರಕಾರದ ಪ್ರೀತಿ ಬಡವರ ಮೇಲಿದೆಯೇ, ಶ್ರೀಮಂತಜನರ ಮೇಲಿದೆಯೇ ಎಂದು ನಿರ್ಧರಿಸುವುದು ಕಷ್ಟವಾಗಲಾರದು. ಸಂಖ್ಯೆಯ ಶೇ 50 ರಷ್ಟು ಬಡಜನರಿಗೆ ಸರಕಾರದ ಒಟ್ಟು ವೆಚ್ಚದ ಶೇ 2.3 ರಷ್ಟು ಮಾತ್ರ ಪರಿಹಾರ ನೀಡಲು ಉದ್ದೇಶಿಸಲಾಗಿದೆ. 30 ಮಿ. ಟನ್ ಆಹಾರ ಧಾನ್ಯಗಳು ಸರಕಾರದ ಗೋದಾಮುಗಳಲ್ಲಿ ಕೊಳೆಯುತ್ತಿದ್ದರೂ ಬಡ ಜನರು ಬೆಲೆ ಏರಿಕೆ, ಹಣದುಬ್ಬರದಿಂದ ತಮ್ಮ ಗ್ರಾಹಕಶಕ್ತಿ ಕಳೆದುಕೊಂಡು ಅವುಗಳನ್ನು ಖರೀದಿಸಲು ಅಶಕ್ತರಾಗಿದ್ದಾರೆ. ಸರಕಾರಿ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಆಹಾರ ಧಾನ್ಯಗಳ, ಗೊಬ್ಬರಗಳ ಮೇಲಿನ ಸಹಾಯಧನವನ್ನು ಕಡಿತಗೊಳಿಸಿದೆ!

ಬಂಡವಾಳ ಶಾಹಿಗಳಿಗೇ ಕುಮ್ಮಕ್ಕು

ಬಡತನನಿವಾರಣೆಯ ಮುಸುಕಿನಲ್ಲಿ, ಸಾರ್ವಜನಿಕ ರಂಗಕ್ಕೆ ಹೆಚ್ಚಿನ ಸಂಪನ್ಮೂಲದ ನೆವದಲ್ಲಿ ಬಂಡವಾಳಶಾಹಿಗಳಿಗೇ ಹೆಚ್ಚು ಕುಮ್ಮಕ್ಕು, ಪ್ರೋತ್ಸಾಹ ಎಂದು ತಿಳಿಯಲು ಕಷ್ಟವಿಲ್ಲ. ಕಳೆದ ವರ್ಷಕ್ಕೂ ಈ ವರ್ಷಕ್ಕೂ ಸರಕಾರದ ನಡಿಲು ಆರ್ಥಿಕ ನೀತಿಯಲ್ಲಿ ಬದಲಾವಣೆಯಿಲ್ಲ. ಅದರ ತಂತ್ರದಲ್ಲಿ ಮಾತ್ರ ಸ್ವಲ್ಪವ್ಯತ್ಯಾಸವಿದೆ. ಕಳೆದುಕೊಳ್ಳುತ್ತಿರುವ ಜನಪ್ರಿಯತೆಯನ್ನು ಪುನಃ ಪಡೆಯುವ ಪ್ರಯತ್ನವಿದೆ ಅಷ್ಟೆ. ಶ್ರೀಮಂತ ವರ್ಗದ ಸುಖಭೋಗದ ಅಂತರಿಕ ಮಾರುಕಟ್ಟೆ ಮತ್ತು ರಫ್ತು ಪ್ರೋತ್ಸಾಹಕ್ಕೆ ಈ ವರ್ಷದ ಮುಂಗಡ ಪತ್ರದಲ್ಲಿಯೂ ಧಾರಾಳ ತೆರಿಗೆ ರಿಯಾಯಿತಿ ನೀಡಲಾಗಿದೆ ಮತ್ತು ಧನಸಹಾಯ ಒದಗಿಸಲಾಗಿದೆ. ಕೈಗಾರಿಕಾ ಕಂಪನಿಗಳ ಲಾಭದ ಮೇಲೆ "ಮೇಲ್ತೆರಿಗೆ" ರದ್ದು ಮಾಡಲಾಗಿದೆ, ಸರ್‌ಚಾರ್ಜನ್ನು ಮುಂದಿನ ವರ್ಷದಿಂದ ರದ್ದು ಮಾಡುವುದಾಗಿ ಆಶ್ವಾಸನೆ ನೀಡಲಾಗಿದೆ. ಹೊಸ ಉದ್ಯಮಗಳಲ್ಲಿ ಹೂಡಿಕೆ

(6ನೇ ಪುಟ ನೋಡಿ)

ತ್ರಿಪುರಾ : 8 ವರ್ಷ ತುಂಬಿದ ಎಡರಂಗ ಸರ್ಕಾರ

ವಿದ್ಯುತ್ ಉತ್ಪಾದನೆಯಲ್ಲಿ ಪ್ರಗತಿ

ಪ್ರಗತಿ ಸೂಚಕ	1977–78	1985-86
ವಿದ್ಯುತ್ ಉತ್ಪಾದನೆ	22.48 ಮಿಲಿಯ ಯುನಿಟ್	66 ಮಿಲಿಯ ಯುನಿಟ್
ವಿದ್ಯುತ್ ಪ್ರೇಷಕ ಮತ್ತು ವಿತರಣಾ ತಂತಿಗಳ ಉದ್ದ	1760 ಕಿ.ಮೀ.	5300 ಕಿ ಮೀ.
ರಾಜ್ಯದ ಶೇಕಡಾ ವಿದ್ಯುದೀಕರಣ	8%	40%
ವಿದ್ಯುದೀಕರಿಸಿದ ಹಳ್ಳಿಗಳು	367	1909
ವಿದ್ಯುದೀಕರಿಸಿದ ಆದಿವಾಸಿ ಹಳ್ಳಿಗಳು	29	675
ಒಟ್ಟು ವಿದ್ಯುತ್ ಬಳಕೆದಾರರು	19000	56000
ತಲಾ ವಿದ್ಯುತ್ ಬಳಕೆ	10 ಯುನಿಟ್	32 ಯುನಿಟ್
ವಿದ್ಯುತ್ ಪಂಪುಗಳು	145	970
ವಿದ್ಯುತ್ ಪಂಪುಗಳು ಆದಿವಾಸಿ ಹಳ್ಳಿಗಳಲ್ಲಿ	5	85

[3ನೇ ಪುಟದಿಂದ]

ನೀಡಲಾಗಿದೆ. ಇದಕ್ಕಾಗಿ ಬೇಕಾದ ಸಂರಚನೆಯನ್ನು ನಿರ್ಮಿಸಲು ಆದ್ಯತೆ ನೀಡಲಾಗಿದೆ. ಇದರ ಅಂಗವಾಗಿ ವಿದ್ಯುತ್ ಶಕ್ತಿಯ ಉತ್ಪಾದನಾ ಸಾಮರ್ಥ್ಯವನ್ನು ಏರಿಸಲಾಗಿದೆ. ಪ್ರತಿ ಹಳ್ಳಿಗೂ ವಿದ್ಯುತ್ ಶಕ್ತಿ ಒದಗಿಸುವಲ್ಲಿ ಭಾರಿ ಪ್ರಗತಿ ಸಾಧಿಸಲಾಗಿದೆ. ವಿವರಗಳಿಗೆ ಕೋಷ್ಟಕ ನೋಡಿ. ಇದಲ್ಲದೆ ಸಾರಿಗೆ, ಸಂಪರ್ಕ, ಮಾರಾಟದ ಸವಲತ್ತುಗಳನ್ನು ಏರಿಸಲು ಕ್ರಮ ಕೈಗೊಳ್ಳಲಾಗಿದೆ. ಕೃಷಿ ಆಧಾರಿತ, ಕೈಕಸುಬು, ಅರಣ್ಯ ಉತ್ಪನ್ನ ಆಧಾರಿತ ಕೈಗಾರಿಕೆಗಳಲ್ಲದೆ ಕಾಗದ, ಸೆಣಬು ಕೈಗಾರಿಕೆಗಳನ್ನು ಸ್ಥಾಪಿಸಿ ವಿಸ್ತರಿಸಲಾಗಿದೆ.

ಇತರ ರಂಗಗಳಲ್ಲಿ

ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರದ ಬಗ್ಗೆ ಜನರಲ್ಲಿ ಆಸಕ್ತಿ, ಪ್ರಜ್ಞೆ ಮೂಡಿಸಲು ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಶಿಕ್ಷಣದ ಕ್ಷೇತ್ರದಲ್ಲಿ ಕೈಗೊಂಡ ಕಾರ್ಯಕ್ರಮಗಳಿಂದ ರಾಜ್ಯದ ಸಾಕ್ಷರತೆ ಈಗ ಶೇಕಡಾ 42 ಇದೆ. ಇದು ದೇಶದ ಸರಾಸರಿಗಿಂತ ಮಾತ್ರವಲ್ಲ, ಹೆಚ್ಚಿನ ರಾಜ್ಯಗಳಿಗಿಂತ ಹೆಚ್ಚು. ಯುವಜನೋತ್ಸವ, ಪುಸ್ತಕ ಮೇಳ, ವಿಜ್ಞಾನ ಮೇಳ, ಆಟ ಸ್ಪರ್ಧೆ ಜನಪದ ಕಲಾಮೇಳ ಇತ್ಯಾದಿಗಳ ಮೂಲಕ ಸಾಂಸ್ಕೃತಿಕ ರಂಗದಲ್ಲೂ ಎಡರಂಗ ತನ್ನ ಕರ್ತವ್ಯಗಳನ್ನು ನಿಭಾಯಿಸಿದೆ.

ಸಾಮಾಜಿಕ ಕಲ್ಯಾಣ ಮತ್ತು ಸಾಮಾಜಿಕ ಶಿಕ್ಷಣದ ಮಹತ್ವ ಮನಗೆಂಡು ಇದಕ್ಕಾಗಿ ಬೇರೆ ಇಲಾಖೆ ಸ್ಥಾಪಿಸಲಾಗಿದೆ. ಹಲವು ಹೊಸ ಕಾರ್ಯಕ್ರಮಗಳನ್ನು ಈ ಇಲಾಖೆ ಹಾಕಿಕೊಂಡಿದೆ.

ಸಿ.ಪಿ.ಐ.(ಎಂ) ಪಾತ್ರ

ಎಡರಂಗದ ಅತಿದೊಡ್ಡ ಪಕ್ಷ ಮತ್ತು ನಾಯಕತ್ವದಲ್ಲಿರುವ ಸಿ.ಪಿ ಐ (ಎಂ) ಪಾತ್ರದ ಬಗ್ಗೆ ಹೇಳದೆ ಎಡರಂಗದ ಸಾಧನೆಯ ಬಗ್ಗೆ ಪೂರ್ತಿ ಹೇಳಿದಂತಾಗದು ಎಡರಂಗದ 8 ವರ್ಷಗಳ ಸಾಧನೆಯ ಕಳಹದಿ ಸಿಪಿಐ (ಎಂ)ನ ತ್ರಿಪುರಾ ರಾಜ್ಯ ಘಟಕದ ಸರಿಯಾದ ಕ್ರಾಂತಿಕಾರಿ ರಾಜಕೀಯ ತಿಳುವಳಿಕೆ, ನಾಯಕತ್ವ, ಜನತೆಯೊಂದಿಗೆ ಸಂಪರ್ಕ, ತ್ರಿಪುರಾದ ರಾಜ್ಯ ಘಟಕ ಬೂರ್ಜ್ವಾ-ಭೂಮಾಲಿಕ ಪ್ರಭುತ್ವದ ಚೌಕಟ್ಟಿನಲ್ಲಿ ಸರ್ಕಾರ ರಚಿಸುವ ಅವಕಾಶ ಸಿಕ್ಕಿದಾಗ ಪಕ್ಷದ ರಾಜಕೀಯ ನಿಲುವು ಬಗೆಗಿನ ಕಾರ್ಯಕ್ರಮದ ಕಲಮು 112ನ್ನು ಹೆಚ್ಚು ಕಡಿಮೆ ಸರಿಯಾದ ರೀತಿಯಲ್ಲಿ ಅನುಸರಿಸಿದೆ.

ಪಕ್ಷ ಜನತೆಯ ಸಾಮೂಹಿಕ ಸಂಘಟನೆ ಚಳುವಳಿಗಿಂತ, ಸರ್ಕಾರಿ ಆಡಳಿತದ ಮೇಲೆ ಹೆಚ್ಚು ಒತ್ತುಹಾಕುವ ಅಪಾಯಕ್ಕೆ ತುತ್ತಾಗಿಲ್ಲ ಜನರಿಗೆ ಸರ್ಕಾರದ ಮಿತಿಯೊಳಗೆ ಪರಿಹಾರ ನೀಡುವುದರ ಜತೆಗೆ, ಇಂತಹ ಸರ್ಕಾರಗಳ ಮಿತಿಯ ಬಗ್ಗೆ ರಾಜಕೀಯ ತಿಳುವಳಿಕೆ ನೀಡುತ್ತಾ ಬಂದಿದೆ. ಒಟ್ಟಾರೆಯಾಗಿ "ದುಡಿಯುವ ಜನರ ಕ್ರಾಂತಿಕಾರಿ ಚಳುವಳಿಗೆ ಉತ್ತೇಜನ ಕೊಡುವಲ್ಲಿ" ಎಡರಂಗ ಸರ್ಕಾರ ಯಶಸ್ವಿಯಾಗಿದ್ದರೂ ಹಲವು ನ್ಯೂನ್ಯತೆಗಳನ್ನು 12ನೇ ರಾಜ್ಯದ ಅಧಿವೇಶನದಲ್ಲಿ ರಾಜ್ಯ ಘಟಕ ಸ್ವಯಂ ವಿಮರ್ಶೆ ಮಾಡಿಕೊಂಡಿದೆ. ಗ್ರಾಮ ಪಂಚಾಯತಿಗಳನ್ನು ಮುಖ್ಯವಾಗಿ ಆರ್ಥಿಕ ಘಟಕವಾಗಿ ನೋಡಿ, ಇದನ್ನು ಗ್ರಾಮದ ಆರ್ಥಿಕತೆ ಮತ್ತು ವರ್ಗ ಶಕ್ತಿಗಳ ಸಮತೋಲನವನ್ನು ದುಡಿಯುವ ಜನರ ಪರವಾಗಿ ಬದಲಾಯಿಸುವ ಕ್ರಮವಾಗಿ ಉಪಯೋಗಿಸುವುದನ್ನು ನಿರ್ಲಕ್ಷಿಸಿರುವುದು ಒಂದು ನ್ಯೂನ್ಯತೆ. ಈಗಾಗಲೇ ರಚಿಸಿರುವ ಗ್ರಾಮ ಪಂಚಾಯತು, ಸಹಕಾರಿಗಳು ಮತ್ತು ರೈತ ಸಂಘಗಳ ನಡುವೆ ಸಮನ್ವಯ ತಂದು ರೈತ ಸಂಘಗಳನ್ನು ಬಲಪಡಿಸದಿರುವುದು ಇನ್ನೊಂದು ನ್ಯೂನ್ಯತೆ. ಪಕ್ಷದ ಯಾವುದೇ ಸಾಮೂಹಿಕ ಸಂಘಟನೆಗಳ ಸದಸ್ಯ ಸಂಖ್ಯೆ ಗಣನೀಯವಾಗಿ ಏರದಿರುವುದು ಇದಕ್ಕೆ ಸಂಬಂಧಪಟ್ಟ ಇನ್ನೊಂದು ನ್ಯೂನ್ಯತೆ.

ಈ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಪಕ್ಷ ಎಡರಂಗವನ್ನು ಇನ್ನೂ ಹೆಚ್ಚಿನ ಸಾಧನೆಗಳತ್ತ ಮುನ್ನಡೆಸಲಿ ಎಂದು ಹಾರೈಸೋಣ. ○

ನೀರು ಪೂರೈಕೆ ಮತ್ತು ನೆರೆ ನಿಯಂತ್ರಣ

	8 ವರ್ಷದ ಹಿಂದೆ	ಈಗ
ಸಣ್ಣ ನೀರಾವರಿಯಿಂದ ನೀರು ಪೂರೈಕೆ ಕ್ಷೇತ್ರಫಲ	3831 ಹೆಕ್ಟೇರ್	14774 ಹೆಕ್ಟೇರ್
ಮಧ್ಯಮ ನೀರಾವರಿ	*	3 ನದಿಗಳಿಂದ ನೀರಾವರಿ ಕಾರ್ಯ ಜಾರಿಯಲ್ಲಿ 13199 ಹೆಕ್ಟೇರ್
ನೆರೆ ನಿಯಂತ್ರಣಾ ದಂಡೆಗಳ ಉದ್ದ	22 ಕಿ.ಮೀ.	104.76 ಕಿ ಮೀ.
ನೆರೆ ನಿಯಂತ್ರಣದಿಂದ ರಕ್ಷಿತ ಜಾಗದ ಕ್ಷೇತ್ರಫಲ	*	20360 ಹೆಕ್ಟೇರ್
ನೀರು ಪೂರೈಕೆಯಿರುವ ಹಳ್ಳಿಗಳು	164	704
ಪ್ರಯೋಜನ ಪಡೆದ ಹಳ್ಳಿಗಳ ಜನಸಂಖ್ಯೆ	1,35,000	4,01,668
ನೀರು ಪೂರೈಕೆ ಪಡೆದ ಪಟ್ಟಣಗಳು	6 (ಭಾಗಶಃ)	10 (ಹೆಚ್ಚು ಕಡಿಮೆ ಪೂರ್ಣ)

ರೈತ ಸಂಘದ ಸಮ್ಮೇಳನಗಳು

ಸುಳ್ಯ ತಾಲ್ಲೂಕು

ತಾ 16-3-1986 ರಂದು ಸುಳ್ಯ ತಾಲೂಕು ರೈತ ಸಂಘದ ತಾಲೂಕು ಸಮ್ಮೇಳನವನ್ನು ಸುಳ್ಯದಲ್ಲಿ, ಸೂರ್ಯ ನಾರಾಯಣ ಭಟ್, ಇವರ ಅಧ್ಯಕ್ಷತೆಯಲ್ಲಿ ಕರೆಯಲಾಯಿತು

ಈ ಸಮ್ಮೇಳನದಲ್ಲಿ 58 ಪ್ರತಿನಿಧಿಗಳು ತಾಲೂಕಿನ ವಿವಿಧ ಗ್ರಾಮಗಳಿಂದ ಭಾಗವಹಿಸಿದ್ದು, ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ರಾಜ್ಯದಲ್ಲಿ ಪೀಡಿಸುತ್ತಿರುವ ಬರಗಾಲದ ಭೀಕರತೆ, ರಾಜ್ಯ ಹಾಗೂ ಕೇಂದ್ರ ಸರಕಾರಗಳು ನಡೆಸುವ ರೈತ ವಿರೋಧಿ ಚಟುವಟಿಕೆಗಳೇ ಮುಂತಾದ ವಿಚಾರಗಳ ಬಗ್ಗೆ ಚರ್ಚಿಸಿರುವುದು ಮಾತ್ರವಲ್ಲದೆ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಬಡ ದರ್ಖಾಸ್ತುದಾರರ ಪ್ರಶ್ನೆಗಳ ಬಗ್ಗೆ, ಮಾಜಿ ಗೇಣಿದಾರರ ಅಲ್ಲದೆ, 5 ಸೆಂಟ್ಸ್ ಮನೆ ಅಡಿಸ್ಥಳ, ಕೃಷಿ ಕೂಲಿ ಕಾರ್ಮಿಕರ ವೇತನ ಹಾಗೂ ಸರಕಾರದಿಂದ ಸಿಗಬೇಕಾದ ಭದ್ರತೆ ತಾಲೂಕಿನ ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಸಹ ಚರ್ಚಿಸಿತು.

ಪ್ರಾದೇಶಿಕ ಸಮಸ್ಯೆಗಳೊಂದಿಗೆ ರಾಜ್ಯ ವ್ಯಾಪಿಯಾಗಿ ರೈತ ಕೃಷಿಕೂಲಿ ಕಾರ್ಮಿಕ, ಹಾಗೂ ಸಾಮಾನ್ಯ ಜನತೆಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ತೀವ್ರ ಹೋರಾಟವನ್ನು ನಡೆಸಲು ನಿರ್ಣಯಿಸಿತು.

ಸುಳ್ಯ ತಾಲೂಕು ರೈತ ಸಂಘಕ್ಕೆ ಅಧ್ಯಕ್ಷರಾಗಿ ಕೆ. ಸೂರ್ಯನಾರಾಯಣ ಭಟ್, ಉಪಾಧ್ಯಕ್ಷರುಗಳಾಗಿ ಎಂ. ರಾಮಯ್ಯ ಗೌಡ ಮತ್ತು ಎಂ ಬಾಲಕೃಷ್ಣ ಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಕೆ ಮೋನಪ್ಪ ಗೌಡ, ಉಪಕಾರ್ಯದರ್ಶಿಯಾಗಿ ಕುಂಞಕಣ್ಣ, ಖಜಾಂಚಿಯಾಗಿ ಎಲ್. ರಾಮಯ್ಯರವರನ್ನೊಳಗೊಂಡ 29 ಜನರ ಕಮಿಟಿ ಆರಿಸಲಾಯಿತು.

ಶಾಹಾಪುರ

ಶಾಹಾಪುರ ತಾಲೂಕು ರೈತ ಸಂಘದ ಸಮಾವೇಶ 13-3-86 ರಂದು ವನದುರ್ಗದಲ್ಲಿ ನಡೆಯಿತು

ಕಾ|| ಶಾಂತವೀರ ಗುಲಬರ್ಗ ಇವರ ಕ್ರಾಂತಿ ಗೀತೆಯೊಂದಿಗೆ ಪ್ರಾರಂಭವಾಯಿತು ಕಾ|| ತಿಮ್ಮಪ್ಪ ನಾಯ್ಕ ಸ್ವಾಗತ ಕೋರಿದರು

ವೀರನಗೌಡ ಮಲ್ಲಾಬಾದಿ ಅವರು ಅಧ್ಯಕ್ಷತೆ ವಹಿಸಿದ್ದರು ರೈತರ ಇಂದಿನ ಪರಿಸ್ಥಿತಿ ಕುರಿತು ಕಾ|| ಕಲ್ಲಪ್ಪ ಕಿರಣಗಿ, ಯಾಣ್ ಪಡೆ, ಎಸ್.ಎಫ್.ಐ. ವತಿಯಿಂದ ಚನಬಸು ಮಾತಾಡಿದರು ಅಧ್ಯಕ್ಷ : ಕೇಶವರಾಜ ರಾಜೂರ, ಉಪಾಧ್ಯಕ್ಷರು : ನರಸಿಂಹನಾಯ್ಕ, ಮಹಿಬೂಬ ಪಟೇಲ, ಪ್ರಧಾನ ಕಾರ್ಯದರ್ಶಿ : ಚನ್ನಪ್ಪ ಆನೆಗುಂದಿ. ಸಹ ಕಾರ್ಯದರ್ಶಿ : ಹಿಬ್ರಹಿಂ ಜಮಾದಾರ ಯಲ್ಲಣ್ಣ ಹೊಸ್ಕೆರಿ. ಖಜಾಂಚಿ : ಲಕ್ಷ್ಮಯ್ಯ ಕಲಾಲ. ಇವರನ್ನೊಳಗೊಂಡ ಕಮಿಟಿ ಆರಿಸಲಾಯಿತು.

ಸಾಯಂಕಾಲ ಸಿದ್ದಯ್ಯ ಅವಲದಾರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಗಸ್ಟಿನ್ ಕಲ್ಲಪ್ಪ, ಮಾನಪಡೆ ಮೊದಲಾದವರು ಭಾಷಣ ಮಾಡಿದರು

ಮಾಗಡಿ ತಾಲ್ಲೂಕು

ಮಾಗಡಿ ತಾಲ್ಲೂಕಿನ ಗುಡೇಮಾರನಹಳ್ಳಿಯಲ್ಲಿ 13-3-1986 ರಂದು ಮಾಗಡಿ ತಾಲ್ಲೂಕಿನ ರೈತ ಸಮ್ಮೇಳನವು ನಡೆಯಿತು.

ಸಮ್ಮೇಳನದಲ್ಲಿ ಜಿ. ಸಿ. ಗಂಗಯ್ಯನವರು ಸಂಘಟನಾ ವರದಿಯನ್ನಿತ್ತು ಅದರ ಆಧಾರದಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಬಲಿಷ್ಠ ಸಂಘಟನೆಯನ್ನು ಕಟ್ಟಿ ಬೆಳೆಸಲು ಅನುವಾಗುವಂತೆ ಪ್ರತಿ ಗ್ರಾಮಗಳಲ್ಲಿಯೂ ಸಭೆಗಳನ್ನು ನಡೆಸಿ ಸಂಘಟನೆ ಬೆಳೆಸಬೇಕೆಂದು ಹೇಳಿದರು. ರೈತರ ಪರಿಸ್ಥಿತಿ ಸಂಘಟನೆಯ ಅವಶ್ಯಕತೆಯನ್ನು ಜಗನ್ನಾಥ್, ರಾಮಭದ್ರಯ್ಯನವರು ತಿಳಿಸಿದರು.

ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಜಗನ್ನಾಥ ಮತ್ತು ಲಕ್ಕಣ್ಣ ಮಾತನಾಡಿ ತಾಲ್ಲೂಕಿನಲ್ಲಿ ರೈತ ಸಂಘಟನೆಗಳನ್ನು ಬಲಪಡಿಸುವಂತೆ ಕರೆನೀಡಿದರು

ಸಭೆಯ ಅಧ್ಯಕ್ಷೆಯನ್ನು ಜಿ. ಕೆ. ನಂಜುಂಡಯ್ಯ ವಹಿಸಿದ್ದರು. ಜಿ. ಸಿ. ಗಂಗಯ್ಯನವರು ಸ್ವಾಗತಿಸಿ ತಿಮ್ಮೇಗೌಡ ವಂದನೆ ಸಲ್ಲಿಸಿದರು.

ಸಮ್ಮೇಳನದಲ್ಲಿ 13 ಜನರ ತಾಲ್ಲೂಕು ಸಮಿತಿ ರಚಿಸಿ ಅದರ ಸಂಚಾಲಕರಾಗಿ ಜಿ. ಸಿ. ಗಂಗಯ್ಯ ಆಯ್ಕೆಯಾಗಿದ್ದಾರೆ. ಜಿಲ್ಲಾ ಸಮ್ಮೇಳನಕ್ಕೆ 8 ಜನ ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತ್ತು.

(5ನೇ ಪುಟದಿಂದ)

ಬಂಡವಾಳವನ್ನು 4–5ವರ್ಷಗಳಲ್ಲಿಯೇ ಅತಿ ಲಾಭಗಳಿಕೆ ಮೂಲಕ ಹಿಂಪಡೆಯಲು ಅತ್ಯಾಕರ್ಷಕ ಸವಕಲು (depreciation)ದರವನ್ನು ನಿಗದಿಗೊಳಿಸಲಾಗಿದೆ. ಅಂದರೆ ಲಾಭಗಳಿಕೆಯ ವೇಳೆ ಈ ಅವಧಿಯಲ್ಲಿ ತೆರಿಗೆ ಕೊಡಬೇಕಾಗಿಲ್ಲ.

ವಿದೇಶಿ ಸಾಲ ಸಹಾಯ ಪಡೆಯಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಭಾರೀ ಪ್ರಮಾಣದ ಪ್ರೋತ್ಸಾಹನುಂದುರಿವಸಲಾಗಿದೆ. ವಿದೇಶಿ ವ್ಯಾಪಾರದ ಅಗಾದ ಪ್ರಮಾಣದ ಕೊರತೆಯನ್ನು ನೀಗಿಸಲು ವಿಶ್ವಬ್ಯಾಂಕ್, ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಇನ್ನಷ್ಟು ಸಾಲ ಪಡೆಯುವ ಪ್ರಯತ್ನದಲ್ಲಿ 'ಸಾಲದ ಬಲೆಗೆ' ಬಿದ್ದು ಸ್ವಾವಲಂಬನೆಯನ್ನು ಕಳೆದುಕೊಳ್ಳುವ ಅಪಾಯ ಪರಿಸ್ಥಿತಿ ಉಂಟಾಗಿದೆ.

ಫಿಲಿಪ್ಪೈನ್ಸ್ : ಅಮೆರಿಕಾದ ಹಿಡಿತ ಮುಂದುವರೆದಿದೆ

ಇತ್ತೀಚಿನ ವರೆಗೆ ಒಬ್ಬ "ಪ್ರಜಾಪ್ರಭುತ್ವವಾದಿ" ಹಾಗೂ ಮುಕ್ತ ಜಗತ್ತಿನ ಪ್ರತಿಪಾದಕನೆಂದು ಅಮೇರಿಕನ್ ಆಳುವ ವಲಯಗಳು ಜಗತ್ತಿಗೆ ಡಂಗುರ ಹೊಡೆಯುತ್ತಾ ಬರುತ್ತಿದ್ದ, ಅಧ್ಯಕ್ಷ ಜಾನ್ಸನ್‌ರಿಂದ ಹಿಡಿದು ರೇಗನ್‌ವರೆಗೆ ಅಮೇರಿಕನ್ ಆಡಳಿತದ ಪೂರ್ಣ ಬೆಂಬಲ ಪಡೆದು ತನ್ನ ಸರ್ವಾಧಿಕಾರಿ ಹಾಗೂ ಭ್ರಷ್ಟ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದ ಫಿಲಿಪ್ಪೈನ್ಸ್‌ನ ಅಧ್ಯಕ್ಷ ಮಾರ್ಕೋಸ್ ಕೊನೆಗೂ ಜನತೆಯ ಕೋಪ ತಾಳಲಾರದೆ ದೇಶ ಬಿಟ್ಟು ಓಡಿಹೋಗಬೇಕಾಗಿ ಬಂತು.

ಅಮೇರಿಕ ಫಿಲಿಪ್ಪೈನ್ಸ್ ಜೊತೆಗೆ ತನ್ನದು "ವಿಶೇಷ ಸಂಬಂಧ" ಎಂದು ಹೇಳಿಕೊಳ್ಳುತ್ತಾ ಬಂದಿದೆ. ಇದು ನಿಜವಾಗಿಯೂ ವಿಶೇಷ ಸಂಬಂಧವೇ ಸರಿ. ಯಾಕೆಂದರೆ 1902ರಲ್ಲಿ ಸ್ಪೈನನ್ನು ಸೋಲಿಸಿ ದೋಚಿಕೊಂಡ ಅಮೆರಿಕಾದ ಮೊದಲ ವಸಾಹತು ಈ ಫಿಲಿಪ್ಪೈನ್ಸ್. ಅಂದಿನಿಂದ ಅಮೇರಿಕನ್ನರು ನಿರ್ಭಯವಾಗಿ ಈ ಸುಂದರ ದ್ವೀಪ ಸಮೂಹವನ್ನು ಶೋಷಿಸುತ್ತಾ ಬಂದಿದ್ದಾರೆ. ಅಮೇರಿಕನ್ ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿನ ಕೈಗಾರಿಕೆಯ ಪ್ರಮುಖ ವಲಯಗಳನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡಿವೆ. ಈ ದೇಶದ ಗ್ರಾಮಾಂತರದಲ್ಲೂ ಫಾರ್ಮ್‌ಗಳು ಅಮೆರಿಕನ್ ಬಹುರಾಷ್ಟ್ರೀಯ ಕಂಪೆನಿಗಳ ಕಪಿಮುಷ್ಟಿ ಈ ದೇಶವನ್ನು ಒಂದು ದೊಡ್ಡ ಕೃಷಿವ್ಯಾಪಾರದ ನವವಸಾಹತುವನ್ನಾಗಿಸಿ ಬಿಟ್ಟಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಯ ಸಾಮರಿಕ ಶೃಂಖಲೆಯಲ್ಲಿ ಫಿಲಿಪ್ಪೈನ್ಸ್ ಒಂದು ಮಹತ್ವದ ಗೊಣಸು. ಇಲ್ಲಿರುವ ತನ್ನ ದೊಡ್ಡ ಮಿಲಿಟರಿ ನೆಲೆಯಲ್ಲಿ ರೇಗನ್ ಆಡಳಿತ ಸದ್ಯದಲ್ಲೇ ಇನ್ನೂ 227 ಪರಮಾಣು ಅಸ್ತ್ರಗಳನ್ನು ನೆಲೆಗೊಳಿಸಲಿದೆಯೆಂಬುದು ಇತ್ತೀಚಿಗೆ ಬಯಲಾದ "ರಾಷ್ಟ್ರೀಯ ಭದ್ರತಾ ಅಭಿವೃದ್ಧಿ ಯೋಜನೆ" ಯಿಂದ ತಿಳಿದು ಬಂದಿದೆ. ಇದಲ್ಲದೆ ಅಮೇರಿಕದ 16ಸಾವಿರ ಮಿಲಿಟರಿ ಸಿಬ್ಬಂದಿ, ಏಳನೇ ನಾವಿಕ ಪಡೆಯ 9000 ಸಿಬ್ಬಂದಿ ಜೊತೆಗೆ ಬಂಡಾಯವನ್ನು ಹತ್ತಿಕ್ಕುವಲ್ಲಿ ವಿಶೇಷ ತರಬೇತಿ ಪಡೆದ ವಿಶೇಷ ಕಾರ್ಯಾಚರಣಾ ಪಡೆಗಳು ಈ ದ್ವೀಪಸಮೂಹಗಳಲ್ಲಿವೆ.

ಸಾಮಾನ್ಯ ತಂತ್ರ

ಅಮೇರಿಕ ತನ್ನ ಊರುಗೋಲು ಕೊಟ್ಟು ನಿಲ್ಲಿಸಿದ ಎಲ್ಲಾ ಸರ್ವಾಧಿಕಾರಿ ಆಡಳಿತಗಳಲ್ಲಾದಂತೆ ಅಧ್ಯಕ್ಷ ಮಾರ್ಕೋಸ್ ಹಾಗೂ ಆತನ ಪತ್ನಿ ಇಮೆಲ್ಡಾಳ "ದಾಂಪತ್ಯ ಸರ್ವಾಧಿಕಾರ" ಅಮೇರಿಕನ್ನರ ಉದಾರ ಆಶ್ರಯದಲ್ಲಿ ದೇಶವನ್ನು ಲೂಟಿ ಮಾಡಿ ವಿದೇಶಗಳಲ್ಲಿ ಮೂರು ಶತಕೋಟಿ ಡಾಲರುಗಳ ಆಸ್ತಿ ರಾಶಿ ಹಾಕಲಾರಂಭಿಸಿದಾಗ, ದೇಶದ ಆರ್ಥಿಕತೆ ಗಂಡಾಂತರಕ್ಕೆ ಸಿಲುಕಿದಾಗ ಅಮೆರಿಕಾದ ಆಳುವ ವಲಯಗಳ ಪ್ರಜಾಪ್ರಭುತ್ವದ ಡಂಗುರದ ಪರದೆ ಹರಿಯಲಾರಂಭಿಸಿತು. ಐ.ಎಂ.ಎಫ್.ನ ಶರ್ತಭರಿತ ಸಾಲ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು. ಅಮೇರಿಕನ್ನರಲ್ಲೂ ತಳಮಳ ಆರಂಭವಾಯಿತು. ಆದರೆ ಮಾರ್ಕೋಸ್ 1983 ರವರೆಗೂ ಕೆಲವೊಮ್ಮೆ ಮಿಲಿಟರಿ ನೆಲೆಗಳಿಗೆ ಪರನಿಗೆ ನಿರಾಕರಿಸುವುದಾಗಿ ಬೆದರಿಸಿ, ಕೆಲವೊಮ್ಮೆ ದೇಶ ಕಮ್ಯುನಿಸ್ಟರ ಕೈಗೆ ಹೋಗುವುದೆಂಬ ಬೆದರಿಕೆಯ ಭೂತ ತೋರಿಸಿ ತನ್ನ ಸರ್ವಾಧಿಕಾರ ಮುಂದುವರಿಸಿಕೊಂಡೇ ಬಂದ. ಅಸಂತೃಪ್ತಿಯೂ ಹೆಚ್ಚುತ್ತಲೇ ಬಂದಿತು. ಮಾರ್ಕೋಸ್‌ನಲ್ಲಿ ಈ ಅಸಂತೃಪ್ತಿಯನ್ನು ಎದುರಿಸುವ ತಾಕತ್ತು ಇಲ್ಲ ಎಂದು ಕಂಡುಕೊಳ್ಳಲಾರಂಭಿಸಿದ ಅಮೇರಿಕ ಆಡಳಿತ ಸಹಾಯಕವಾಗಬಹುದಾದ ಪರ್ಯಾಯ ವ್ಯಕ್ತಿಗಳಿಗಾಗಿ ಹುಡುಕಾಟ ಆರಂಭಿಸಿತು. ಒಬ್ಬ ಸರ್ವಾಧಿಕಾರಿಯನ್ನು ಕಿತ್ತೊಗೆದು ಇನ್ನೊಬ್ಬ ಹೆಚ್ಚು ಸ್ವೀಕಾರಾರ್ಹ ಸರ್ವಾಧಿಕಾರಿಯನ್ನು ತರುವುದು ಸಾಮ್ರಾಜ್ಯಶಾಹಿಯ ಸಾಮಾನ್ಯತಂತ್ರ. ಹಲವು ವರ್ಷಗಳ ಹಿಂದೆ ಆಗಿನ ದಕ್ಷಿಣ ವಿಯತ್ನಾಮ್‌ನ ಸೈಗಾನ್‌ನಲ್ಲಿ ಡೀಮ್‌ನನ್ನು ಕೈಬಿಟ್ಟದ್ದು ಹಾಗೂ ಕೇವಲ ಇತ್ತೀಚೆಗಷ್ಟೇ ಹೈತಿಯಿಂದ ಅಮೇರಿಕನ್ ವಿಮಾನ ಪಡೆದು ನೆರವಿನಿಂದ ಪಲಾಯನ ಮಾಡಿದ ಡುವೆಲಿಯರ್ ಇದಕ್ಕೆ ಉದಾಹರಣೆಗಳು.

ಮಾರ್ಕೋಸ್‌ನ ಮೂಲೆಗೆ ತಳ್ಳಲು ಅಮೇರಿಕದ ಆಡಳಿತ ಕಳೆದ ವರ್ಷವೇ ಸಿದ್ಧತೆನಡೆಸಿತ್ತು. "ಎನ್.ಎಸ್.ಎಸ್.ಡಿ–ಫಿಲಿಪ್ಪೈನ್ಸ್ ಬಗ್ಗೆ ಅಮೇರಿಕನ್ ಧೋರಣೆ" ಎಂಬ ಒಂದು ಗುಪ್ತವರದಿಯನ್ನು ಸಿ.ಐ.ಎ., ಪೆಂಟಗಾನ್ ಹಾಗೂ ಅಮೇರಿಕನ್ ಗೃಹ ಇಲಾಖೆ ಸೇರಿ 15 ತಿಂಗಳ ಅಧ್ಯಯನದ ನಂತರ ತಯಾರಿಸಿತ್ತು. "ನಮ್ಮ ಬೆಂಬಲ ಮಾರ್ಕೋಸ್‌ಗೆ ಉಳಿದಿರುವ ಅತ್ಯಂತ ದೊಡ್ಡಶಕ್ತಿ" ಎಂದು ಆರಂಭಿಸಿರುವ ಈ ವರದಿಯಲ್ಲಿ "ಮಾರ್ಕೋಸ್ ಸದ್ಯದ ಘಟ್ಟದಲ್ಲಿ ಸಮಸ್ಯೆಯ ಒಂದು ಭಾಗವಾಗಿರುವಂತೆಯೇ, ಆ ಸಮಸ್ಯೆಯ ಪರಿಹಾರದ ಭಾಗ ಕೂಡಾ ಆಗಿದ್ದಾನೆ. ಅವನೊಂದಿಗೆ ಕೆಲಸ ಮಾಡಲು ಯೋಜಿತ ಪ್ರೋತ್ಸಾಹ ಹಾಗೂ ತಡೆಗಳ ಮೂಲಕ ಆತನ ಮೇಲೆ ಪ್ರಭಾವ ಬೀರಲು, ಕ್ರಮೇಣ ಒಂದು ಉತ್ತರಾಧಿಕಾರಿ ಸರ್ಕಾರಕ್ಕೆ ಶಾಂತಿಯುತ ಪರಿವರ್ತನೆಯಾಗಲು ಸಾಧ್ಯವಾಗಬೇಕಾದರೆ ಆತನು ನಮಗೆ ಬೇಕು. ಮಾರ್ಕೋಸ್ ಅನಿರ್ದಿಷ್ಟ ಕಾಲದ ವರೆಗೆ ಅಧಿಕಾರದಲ್ಲಿರಲು ನಮ್ಮನ್ನು ಬಳಸಿಕೊಳ್ಳುತ್ತಾನೆ" ಎಂದು ಹೇಳಿ ಪರಿಸ್ಥಿತಿ ಹತೋಟಿ ಮೀರಿದಾಗ "ಭದ್ರತಾ ನೆರವು" ಅರ್ಥಾತ್ ಮಿಲಿಟರಿ ಹಸ್ತಕ್ಷೇಪದ ಸೂಚನೆ ಈ ವರದಿ ನೀಡುತ್ತದೆ.

ಮಾರ್ಕೋಸ್‌ನ ಅಂತ್ಯದ ಆರಂಭವಾದದ್ದು ಅಮೇರಿಕಾದಿಂದ ವಾಪಸ್ಸಾದ ತನ್ನ ಪ್ರತಿಸ್ಪರ್ಧಿ ಹಾಗೂ ಅಮೇರಿಕ ಆರಿಸಿದ ಪರ್ಯಾಯ ವ್ಯಕ್ತಿ, ಬೆನಿಗ್ನೋ ಅಕ್ವಿನೋರ ಹಾಡುಹಗಲೇ ನಡೆದ ಕೊಲೆಯಿಂದ. ಅಮೇರಿಕಾಕ್ಕೆ ಆತಂಕ ಉಂಟು ಮಾಡಿರುವ ಮುಖ್ಯ ಅಂಶವೆಂದರೆ 73 ರಲ್ಲಿ, 59 ಪ್ರಾಂತ್ಯಗಳಲ್ಲಿ ನವ ಜನತಾ ಸೇನೆ [ಎನ್.ಪಿ.ಎ.]ಯ ನೇತೃತ್ವದಲ್ಲಿ ಕಮ್ಯುನಿಸ್ಟ್-ಮುಂದಾಳುತ್ವದ ಗೆರಿಲ್ಲಾ ಹೋರಾಟ. ಇದರಿಂದ ತನ್ನ ಮಿಲಿಟರಿ ನೆಲೆಗಳಿಗೆ ಅಪಾಯ ಕಂಡ ರೇಗನ್ ಆಡಳಿತ ಮಾರ್ಕೋಸ್‌ಗೆ ಎರಡು ಶರತ್ತು ಹಾಕಿತು. ಒಂದು, ಹೊಸ ಚುನಾವಣೆ ನಡೆಸುವುದು, ಎರಡು, ಸೇನಾಧ್ಯಕ್ಷ ವೆರ್‌ನ ಸ್ಥಾನದಲ್ಲಿ ಫಿಡೆಲ್ ರಾಮೋಸ್‌ನನ್ನು ನೇಮಿಸುವುದು. ಚುನಾವಣೆ ತನ್ನ ಪರವಾಗಿ ಮಾಡಿಕೊಳ್ಳಬಹುದೆಂಬ ಭರವಸೆಯಿದ್ದು ಇದಕ್ಕೆ ಒಪ್ಪಿಕೊಂಡ ಮಾರ್ಕೋಸ್ ಫೆಬ್ರವರಿ 7ರಂದು ಚುನಾವಣೆ ಘೋಷಿಸಿದ.

ಸಾಮ್ರಾಜ್ಯಶಾಹಿ ಕೈಬಿಟ್ಟಿತು

ಆದರೆ ವ್ಯಾಪಕ ಆಧಾರದ ಜನಪ್ರಿಯ ಆಂದೋಲನ ಚುನಾವಣೆಯಲ್ಲಿ ಯಾವುದೇ ಕಪಟವನ್ನು ಸಹಿಸಲು ಸಿದ್ಧವಿರಲಿಲ್ಲವೆಂಬುದು ಮತ್ತು ವಿರೋಧ ಪಕ್ಷಗಳಿಂದ ಸರ್ವಸಮ್ಮತ ಅಭ್ಯರ್ಥಿ ಮೂಡಿಬರಬಹುದೆಂದು ಮಾರ್ಕೋಸ್ ಎಣಿಸಿರಲಿಲ್ಲ. ಚುನಾವಣೆಯಲ್ಲಿ ಮಾರ್ಕೋಸ್ ನಡೆಸಿದ ನೇರ ಮೋಸ ಆತ ತನ್ನ ದೇಶದಲ್ಲಿ ಅಲ್ಪ ಸ್ವಲ್ಪವಾದರೂ ಮರ್ಯಾದೆ ಕಾಪಾಡಿಕೊಳ್ಳಬಹುದೆಂಬ ಅಮೇರಿಕದ ನಿರೀಕ್ಷೆಯನ್ನು ಸುಳ್ಳಾಗಿಸಿತು. ಪ್ರತಿಗಾಮಿತ್ವದಲ್ಲಿ ಅದ್ದಿ ತೆಗೆದಂತಿರುವ ರೇಗನ್ ಮಾತ್ರ ತನ್ನ ಆರಂಭದ ಹೇಳಿಕೆಗಳಲ್ಲಿ ಸ್ವಲ್ಪ ಎಡವಿ ಎರಡೂ ಕಡೆ ಮೋಸ ನಡೆದಿವೆಯೆಂದರೂ ಅಮೇರಿಕದ ಆಳುವ ವಲಯಗಳು ಇಂತಹ ಸಂದರ್ಭಕ್ಕೆ ತಕ್ಕ ಯೋಜನೆಯನ್ನು ತಯಾರಿಸಿಟ್ಟುಕೊಂಡಿದ್ದರು. ಮಾರ್ಕೋಸ್‌ನನ್ನು ಇನ್ನು ಮುಂದುವರಿಯಲು ಬಿಟ್ಟರೆ ತೀವ್ರಗಾಮಿ ಎಡ ಪಂಥೀಯರಿಗೆ ನೆರವಾಗುತ್ತದೆ ಎಂದು ವಾದಿಸಿದ ಈ ವಲಯಗಳಿಗೆ ಕೊರಾಝೋನ್ ಅಕ್ವಿನೋ ಮತದಾರರ ನಿಜವಾದ ಆಯ್ಕೆ ಎಂದು ಒಪ್ಪಿಕೊಳ್ಳುವುದು ಬಿಟ್ಟು ಬೇರೆ ಮಾರ್ಗವಿರಲಿಲ್ಲ.

ಚುನಾವಣೆಯ ಮೋಸಗಳ ವಿರುದ್ಧ ಜನತೆಯ ತೀವ್ರ ಪ್ರತಿಕ್ರಿಯೆ ಹಾಗೂ ರಕ್ಷಣಾ ಮಂತ್ರಿ ಎನ್ರಿಲೆ ಮತ್ತು ಉಪ ಸೇನಾಧ್ಯಕ್ಷ ರಾಮೋಸ್‌ರ ಬಂಡಾಯ ಮಾರ್ಕೋಸ್‌ಗೆ ಮುಳುವಾದವು. ಅಮೇರಿಕ ಕಳೆದೆರಡು ವರ್ಷಗಳಿಂದ ಸೇನೆಯಲ್ಲಿನ ಭ್ರಷ್ಟ ವ್ಯಕ್ತಿಗಳನ್ನು ತೆಗೆದು ಹಾಕಬೇಕೆಂದು ಒತ್ತಾಯಿಸುತ್ತಿದ್ದ ರಾಮೋಸ್ ಹಾಗೂ ಇತರ ಸೇನಾಧಿಕಾರಿಗಳೊಂದಿಗೆ ಗೆಳೆತನ ಬೆಳೆಸಲು ತನ್ನ ಹಿತಾಸಕ್ತಿ ರಕ್ಷಿಸಿಕೊಳ್ಳುವ ದೃಷ್ಟಿಯಿಂದ ಆರಂಭಿಸಿತ್ತು. ಯಾಕೆಂದರೆ ಈ ಭ್ರಷ್ಟ ವ್ಯಕ್ತಿಗಳಿಂದಾಗಿ ಸರಕಾರಿ ಸೇನೆ ಹೀನಸ್ಥಿತಿ ತಲುಪಿದ್ದು ಎನ್.ಪಿ.ಎ. ಗೆರಿಲ್ಲಾಗಳನ್ನು ಎದುರಿಸುವಲ್ಲಿ ಅದು ಅಶಕ್ತವಾಗಲಾರಂಭಿಸಿತ್ತು. ಸ್ವಾಭಾವಿಕವಾಗಿಯೇ ಎನ್.ಪಿ.ಎ ಕೈ ಮೇಲಾಗದಂತೆ ಸೇನೆಯನ್ನು ದೃಢಗೊಳಿಸುವ ಅಮೇರಿಕನ್ ಆಡಳಿತ ಬೆಂಬಲ ನೀಡುತ್ತಾ ಬರುತ್ತಿತ್ತು.

ಯಥಾಸ್ಥಿತಿಯ ಮುಂದುವರಿಕೆ

ರಾಜಕೀಯಕ್ಕೆ ಹೊಸಬಳಾದ, ಫಿಲಿಪ್ಪೈನ್ಸ್‌ನ ಇತರ ಬೂರ್ಜ್ವಾ ರಾಜಕಾರಣಿಗಳಂತೆ ಅಪಖ್ಯಾತಿಯೇನೂ ಇರದ ಹಾಗೂ ಕೊಲೆಗೀಡಾದ ಅಕ್ವಿನೋರ ಹುತಾತ್ಮತೆಯ ಪ್ರತೀಕವಾದ ಕೊರಾಝೋನ್, ಅಕ್ವಿನೋ ಮಾರ್ಕೋಸ್ ವಿರುದ್ಧ ಹೋರಾಡಿ ಗೆದ್ದಿದ್ದಾರೆ. ಆದರೆ ಫಿಲಿಪ್ಪೈನ್ಸ್ ಜನತೆಯ ಸಮಸ್ಯೆಗಳು ಹಾಗೇ ಉಳಿದಿವೆ. ಆರ್ಥಿಕ ದುಸ್ಥಿತಿ ಅಮೇರಿಕಾದ ಬಂಡವಾಳದ ಕಪಿಮುಷ್ಟಿ ಬಡತನದ ಬೇಗೆಯ ಎಂಥತ್ತು ತೀರದಾ ಜನತೆಯ ಜೀವನ–ಇವೆಲ್ಲಾ ಹಾಗೇ ಉಳಿದಿದೆ.

ಶ್ರೀಮತಿ ಅಕ್ವಿನೋ ಪ್ರತಿನಿಧಿಸುತ್ತಿರುವುದು ಅಮೇರಿಕನ್ ಬಂಡವಾಳ ಸೃಷ್ಟಿಸಿರುವ ಒಂದು ವರ್ಗವನ್ನೇ. ಆಕೆಯ ಮಂತ್ರಿಮಂಡಲದಲ್ಲಿರುವವರು ಹೇಯ ಬಂಡವಾಳ ಶಾಹಿಗಳೇ. ಆರ್ಥಿಕ ಮಂತ್ರಿ ಹಾಗೂ ಆಕೆಯ ಸಲಹೆಗಾರ ಜೈಮೆ ಒಂಗ್‌ಪಿನ್ ಒಬ್ಬ ದೊಡ್ಡ ವ್ಯಾಪಾರಿ. ಮಾರ್ಕೋಸ್‌ನ ವಿರುದ್ಧ ಅಂತಿಮ ಬಂಡಾಯದ ನೇತೃತ್ವ ವಹಿಸಿದ್ದ ರಕ್ಷಣಾ ಮಂತ್ರಿ ಎನ್ರಿಲೆ ಫಿಲಿಪ್ಪೈನ್ಸ್‌ನ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಮೂರನೆಯವ. ಮಾರ್ಕೋಸ್ ಆತನಿಗೆ ತೆಂಗು ಕೈಗಾರಿಕೆಯ ಗುತ್ತೇದಾರಿಕೆ ಕೊಟ್ಟುಬಿಟ್ಟಿದ್ದ. ಬಂಡಾಯದ ಇನ್ನೊಬ್ಬ ಮುಖ್ಯ ವ್ಯಕ್ತಿ ಹಾಗೂ ಈಗ ಸೇನಾಧ್ಯಕ್ಷನಾಗಿರುವ ಫಿಡೆಲ್ ರಾಮೋಸ್ ಅಮೇರಿಕಾದ ಸೈನಿಕ ಶಾಲೆಯಲಿ ತರಬೇತಿ ಪಡೆದು ವಿಯಟ್ನಾಂ ವಿಮೋಚನಾ ಹೋರಾಟದ ವಿರುದ್ಧ ಫಿಲಿಪ್ಪೈನ್ಸ್ ತುಕಡಿಯ ನೇತೃತ್ವ ವಹಿಸಿದಾತ. ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಹಾಗೂ ವಿರೋಧಿ ರಾಜಕೀಯ ಕಾರ್ಯಕರ್ತರ ವಿರುದ್ಧ ಅಸೈನಿಕ ಕಾರ್ಯಾಚರಣೆ ನಡೆಸಿದಾತನೂ ಈತನೇ. ಅಂದರೆ ಅಮೇರಿಕನ್ನರ ನೆಚ್ಚಿನ ಗೆಳೆಯನೊಬ್ಬ ಸೇನಾಧ್ಯಕ್ಷನಾಗಿದ್ದಾನೆ ಹಾಗು ಅಮೇರಿಕನ್ನರಿಗೆ ಅಡಿಯಾಳುಗಳೆಂದು ಹೆಸರಾದ ವ್ಯಾಪಾರಸ್ಥರು ಸಂಪ್ರದಾಯ ಶರಣ ರಾಜಕಾರಣಿಗಳು ಮಂತ್ರಿಮಂಡಳದಲ್ಲಿದ್ದಾರೆ.

ಪರ್ಯಾಯ ಕಾರ್ಯಕ್ರಮ

ರೇಗನ್ ಆಡಳಿತ ತನ್ನ ಬಂಡವಾಳ ಹಾಗೂ ಸೈನಿಕ ಅಸ್ತಿತ್ವ ರಕ್ಷಿಸಿಕೊಳ್ಳುವಲ್ಲಿ ಹೊಸ ಆಡಳಿತ ತನ್ನ ಇಚ್ಛಾನುಸಾರ ನಡೆಯುವಂತೆ ಮಾಡಲು ದೃಢನಿರ್ಧಾರ ಮಾಡಿದೆ. ಆದರೆ ಫಿಲಿಪ್ಪೈನ್ಸ್ ಜನತೆಯ ಬೇಡಿಕೆ ಬೇರೆಯೇ ಆಗಿದೆ. ಇವೆರಡರ ನಡುವೆ ಸಿಲುಕಿಕೊಂಡಿರುವ ಸ್ಥಿತಿ ಶ್ರೀಮತಿ ಅಕ್ವಿನೋರದ್ದು. ಅಮೇರಿಕಾ ಮತ್ತು ಜಪಾನ್ ಈ ದೇಶದ ದುಸ್ಥಿತಿಯಲ್ಲಿರುವ ಆರ್ಥಿಕತೆಯನ್ನು ಉಳಿಸಲು ತಮ್ಮ ಬಂಡವಾಳವನ್ನು ಹರಿಸಬಹುದು. ಆದರೆ ಫಿಲಿಪ್ಪೈನ್ಸ್‌ನ ರಾಜಕೀಯ ರಚನೆಯಲ್ಲಿ ಇದರಿಂದ ಯಾವ ಸುಧಾರಣೆಯೂ ಆಗಲಿಕ್ಕಿಲ್ಲ.

ಇದಕ್ಕೆ ಪರ್ಯಾಯವಾಗಿ ಫಿಲಿಪ್ಪೈನ್ಸ್ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಏಳು ಸಂಘಟನೆಗಳು ಸೇರಿರುವ "ರಾಷ್ಟ್ರೀಯ ಪ್ರಜಾಪ್ರಭುತ್ವರಂಗ" (ಎನ್.ಡಿ.ಎಫ್) ದೇಶದ ಉದ್ಧಾರಕ್ಕೆ ಹನ್ನೆರಡು ಅಂಶಗಳ ಕಾರ್ಯಕ್ರಮವನ್ನು ಮುಂದಿಟ್ಟಿದೆ. ಅಮೇರಿಕ ಹಾಗೂ ಇತರ ವಿದೇಶೀಯರೊಂದಿಗೆ ಎಲ್ಲಾ ಒಪ್ಪಂದಗಳನ್ನು ಅಂತ್ಯಗೊಳಿಸುವುದು, ನೈಜ ಭೂಸುಧಾರಣೆಗಳನ್ನು ಪೂರ್ಣಗೊಳಿಸುವುದು, ಆರ್ಥಿಕ ಬೆಳವಣಿಗೆಯ ಪ್ರಮುಖ ಅಂಶವಾಗಿ ರಾಷ್ಟ್ರೀಯ ಕೈಗಾರಿಕೀಕರಣ ನಡೆಸುವುದು, ಜನತೆ ತಮ್ಮ ಪ್ರಜಾಪ್ರಭುತ್ವ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸಲು ಅವಕಾಶ ಹಾಗೂ ಒಂದು ಕ್ರಾಂತಿಕಾರಿ, ಸ್ವತಂತ್ರ ಹಾಗೂ ಶಾಂತಿಪ್ರಿಯ ವಿದೇಶೀ ಧೋರಣೆ ಅಂಗೀಕರಿಸುವುದು ಇವು ಎನ್.ಡಿ.ಎಫ್.ನ ಕಾರ್ಯಕ್ರಮಗಳಲಿ ಸೇರಿವೆ.

ಹೆಚ್ಚೆಚ್ಚು ವ್ಯಾಪಕ ಜನಸಮೂಹಗಳನ್ನು ತಮ್ಮತ್ತ ಗೆದ್ದುಕೊಳ್ಳುತ್ತಿರುವ ಈ ತೀವ್ರ ಕಾರ್ಯಕ್ರಮ ಮಾತ್ರವೇ ಫಿಲಿಪ್ಪೈನ್ಸ್ ಜನತೆಯನ್ನು ಉದ್ಧರಿಸಲು, ಮಾರ್ಕೋಸ್‌ನನ್ನು ಪತನಗೊಳಿಸಿದ ಜನತೆಯ ವಿಜಯವನ್ನು ಬದಿಗೊತ್ತಿ ದೇಶವನ್ನು ಲೂಟಿ ಹೊಡೆಯುವುದನ್ನು ಮುಂದುವರಿಸುವ ಅಮೇರಿಕನ್-ಫಿಲಿಪ್ಪೈನ್ಸ್ ಪ್ರತಿಗಾಮಿಗಳ ಕೂಟವನ್ನು ಒಡೆದು ಹಾಕಲು ಸಮರ್ಥವಾಗಿದೆ.

["ಪೀಪಲ್ಸ್ ಡೆಮಾಕ್ರಸಿ" ಯಲ್ಲಿ ಪ್ರಕಾಶ ಕಾರಟ್ ಬರೆದ ಲೇಖನದ ಸಂಗ್ರಹಾನುವಾದ]

ಕುಸಿದು ಬೀಳುತ್ತಿರುವ [illegible]ದ ಆಡಳಿತ

(1ನೇ ಪುಟದಿಂದ)

ಜಾಲುಗಾರರಾಗಿದ್ದಾರೆ. ದೇಶದ ರಾಜಕೀಯವನ್ನು ಬುಡಮೇಲು ಮಾಡಿ, ವಿದೇಶಿಯರೊಡನಿರುವ ಸ್ನೇಹ ಮತ್ತು ಸಂಬಂಧವನ್ನು ಕೆಡಿಸುವ, ದೇಶದ ರಕ್ಷಣಾ ವ್ಯವಸ್ಥೆಯನ್ನು ಹಾಳು ಮಾಡುವ ಒಳಸಂಚು ನಡೆದಿದೆ” ಎಂದು ರಾಮ ಸ್ವರೂಪ ಗೂಢಚರ್ಯೆ ಖಟ್ಲೆಯಲ್ಲಿ ಪೋಲೀಸರು ತಯಾರಿಸಿದ ಚಾರ್ಜ್‌ಶೀಟಿನಲ್ಲಿ ಉಲ್ಲೇಖಿಸಲಾಗಿದೆ. ಈ ಕೇಸಿನ ಬಹಿರಂಗ ದಾಖಲೆಗಳು ರಾಜೀವ ಗಾಂಧಿಯವರ ಕಣ್ಣು ತೆರೆದಂತೆ ಕಂಡ[illegible]

ರಾಜ್ಯ[illegible]ತೆಯ ಮೇಲೂ [illegible] ಬೀಳ ಹತ್ತಿದೆ. [illegible] ಅಸಮರ್ಥ [illegible] ಸರ್ಕಾರ[illegible] ನೀಡಿತ್ತು. ಕೇರಳದಲ್ಲಿ ಜಾತೀಯ ಪಕ್ಷಗಳೊಡನೆ ಸರ್ಕಾರ ನಡೆಸುತ್ತಿದೆ. ತ್ರಿಪುರಾದಲ್ಲಿ ಛಿದ್ರಕಾರಿ, ಪ್ರತ್ಯೇಕತಾವಾದಿ ಶಕ್ತಿಗಳೊಡನೆ ಸೇರಿ ಚುನಾವಣೆ ನಡೆಸುತ್ತಿದೆ.

ದೆಹಲಿಯ ಅತಿ ಭದ್ರವಾದ ತಿಹಾರ್ ಜೈಲಿನಿಂದ ಕುಖ್ಯಾತ ಕೈದಿ ಚಾರ್ಲ್ಸ್ ಶೋಭರಾಜ್ ಇತರ 6 ಕೈದಿಗಳೊಡನೆ ಪರಾರಿ. ಹಲವಾರು ದೇಶಗಳಲ್ಲಿ ಹಾಗೆಯೇ ನಮ್ಮ ದೇಶದ ಕರ್ನಾಟಕವನ್ನೊಳಗೊಂಡ ಹಲವಾರು ರಾಜ್ಯಗಳಲ್ಲಿ ಅಪರಾಧ ಮಾಡಿದ ಈತ ಹಾಡು ಹಗಲಲ್ಲೇ, ವಿದೇಶಿ ಕಾರಿನಲ್ಲಿ ಪರಾರಿಯಾಗ ಬೇಕಾದರೆ ರಾಜ್ಯ ಸರ್ಕಾರಗಳ ಆಡಳಿತೆ ಎಷ್ಟು ಕೊಳೆತು ನಾರುತ್ತಿದೆ, ಎಂತಹ ಅಪಾಯಕಾರಿ ದಂಡೆ ತಲ್ಪಿದೆಂಬುದನ್ನು ತೋರಿಸುತ್ತದೆ.

ಚಾರ್ಲ್ಸ್ ಶೋಭರಾಜ್‌ನಿಗಾಗಿ ಥೈಲೆಂಡ್ ಸರ್ಕಾರ ಅರ್ಜಿ ಸಲ್ಲಿಸಿತ್ತು. ದಿಲ್ಲಿಯ ಮೆಟ್ರೊಪೊಲಿಟನ್ ನ್ಯಾಯಾಧೀಶರು ಈತನನ್ನ ಥೈಲೆಂಡಿಗೆ ಒಪ್ಪಿಸುವಂತೆ ಆಜ್ಞೆ ಮಾಡಿದ್ದರು. ಆದರೆ ದಿಲ್ಲಿಯ ವಿದೇಶ ವ್ಯವಹಾರ ಸಚಿವಾಲಯದಲ್ಲಿ ಈ ಫೈಲು ಹಾಗೆಯೇ ಇನ್ನೂ ಬಿದ್ದಿದೆ. ಕೇಂದ್ರ ಆಡಳಿತೆಯಲ್ಲಿ ವಿದೇಶಿಯರ ಕೈವಾಡ ಎಷ್ಟು ಆಳವಾಗಿ ಒಳಹೊಕ್ಕಿದೆಯೋ ಶೋಭರಾಜ್ ನಂತ ಕೊಲೆಗಡುಕರು ದರೋಡೆಕೋರರ ಕೈ ಕೂಡ ಆಡಳಿತೆಯ ಬಂಧನವನ್ನು ತಪ್ಪಿಸಬಹುದೆಂಬುದನ್ನು ಇದು ತೋರಿಸಿ ಕೊಡುತ್ತದೆ.

ಇಂಥ ಕೈದಿಗಳಿಗೆ ಕೋಳ (ಬೇಡಿ) ತೊಡಿಸಬಾರದೆಂದು ನ್ಯಾಯಾಲಯ ಆಜ್ಞೆ ಮಾಡುವುದು, ಜೈಲಿನಲ್ಲಿ ಸ್ವತಂತ್ರವಾಗಿ ತಿರುಗಾಡುವಂತೆ ಅವಕಾಶ ಮಾಡಿಕೊಡುವುದು, ರವಿವಾರ ರಜೆ ದಿವಸ ಅವನ ಭೆಟ್ಟಿಗೆ ವ್ಯವಸ್ಥೆ ಮಾಡುವುದು, ಅವನ ಗೆಳೆಯರು ತಂದ ತಿನಿಸನ್ನು ಜೈಲ್ ನೌಕರರು ತಿನ್ನುವುದು, ಮೂರ್ಛೆ ಹೋಗುವುದು ಇವೆಲ್ಲ ಅತ್ಯಂತ ನಾಚಿಕೆಗೇಡಿ ಕೃತ್ಯಗಳು. ಎಂಥ ಘೋರವಾದ ದುರ್ಗತಿಯತ್ತ, ನಮ್ಮ ಆಡಳಿತೆ ಜರಿದು ಬೀಳುತ್ತಿದೆ!

ಮೇಲ್ಕಾಣಿಸಿದ ರೋಮಾಂಚಕಾರಿ ಪ್ರಕರಣಗಳ ಜೊತೆಯಲ್ಲಿಯೇ ಇಂಡಿಯನ್ ಯೂನಿಯನ್ ಮುಸ್ಲಿಂಲೀಗಿನ ಆಮಂತ್ರಣದ ಮೇರೆಗೆ, ಕಾಂಗ್ರೆಸ್ ಸರಕಾರದ ಅಧಿಕ್ಯದಲ್ಲಿ ಕೇಂದ್ರ, ಸರಕಾರ “ಅಪಾಯಕಾರಿ” ವ್ಯಕ್ತಿಗಳೆಂದು ಹೆಸರಿಸಿದ ಇಬ್ಬರು, ಅರಬ್ ರಾಷ್ಟ್ರದ ಮೂವರು ಕೇರಳದಲ್ಲಿ 10 ದಿವಸ ರಾಜ್ಯಾತಿಥ್ಯದೊಂದಿಗೆ ತಿರುಗಾಡಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮಸೀದಿಗಳ ಪುನರ್ರಚನೆಗೆ ಲಕ್ಷಾವಧಿ ಹಣ ದಾನ ಮಾಡಿದ ಘಟನೆ ಗಾಢ ನಿದ್ರೆಯಲ್ಲಿದ್ದವರನ್ನೂ ಎಚ್ಚರಿಸಬಹುದಾದ ಗಂಡಾಂತರಕಾರಿ ಘಟನೆ.

ಕಾಂಗ್ರೆಸ್ ಸರಕಾರದ ಆರ್ಥಿಕ ನೀತಿಯಿಂದಾಗಿ ಉಂಟಾಗಿರುವ ಬಡತನ, ನಿರುದ್ಯೋಗ, ಆರ್ಥಿಕ ಬಿಕ್ಕಟ್ಟು ನಮ್ಮ ಜನರನ್ನು, ನೌಕರರನ್ನು ಆಡಳಿತೆಯನ್ನು ವಿದೇಶಿ ಏಜೆಂಟರ, ಜಾತೀಯವಾದಿಗಳ, ಛಿದ್ರಕಾರಿಗಳ, ಒಳಸಂಚುಗಾರರ ಬಲೆಗೆ ಬೀಳುವಂತೆ ಮಾಡುತ್ತಿದೆ.

ಕಾಂಗ್ರೆಸ್ ಪಕ್ಷ ರಾಜಕೀಯವಾಗಿ ಅವುಗಳನ್ನೆದುರಿಸಲು ಅಶಕ್ತವಾಗಿದೆ. ಆದರೆ ಇತ್ತೀಚೆಗೆ ಶಹಾಬಾನು ಕೇಸಿನಲ್ಲಿ, ಲೋಕಸಭೆಯಲ್ಲಿ ತಂದ ಮಸೂದೆಯ ಕುರಿತು ಕಾಂಗ್ರೆಸ್ ಪಕ್ಷದಲ್ಲೇ ಭಿನ್ನಾಭಿಪ್ರಾಯ ಮೂಡಿ ಬಂದಿದೆ. ಮಂತ್ರಿ ಆರೀಫ್ ಮಹಮ್ಮದ್ ರಾಜೀನಾಮೆ ಕೊಟ್ಟಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಪಶ್ಚಿಮ ಬಂಗಾಲ ಮತ್ತು ತ್ರಿಪುರದ ಎಡರಂಗ ಸರಕಾರಗಳ ಅಸ್ತಿತ್ವ, ಆ ಸರಕಾರಗಳಿಗಿರುವ ಜನಬೆಂಬಲವೇ ಜಾತೀಯ, ಛಿದ್ರಕಾರಿ ಶಕ್ತಿಗಳ ವಿರುದ್ಧ ದೇಶವನ್ನು ರಕ್ಷಿಸುವ ಭೀಮಬಲವಾಗಿದೆ. ಕೇರಳದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗಿನೊಡನೆ ಸಂಬಂಧ ಕಡಿದುಕೊಂಡಿರುವುದು, ಶಾಬಾನೂ ಕೇಸಿನಲ್ಲಿ ಪಾರ್ಟಿಯ ನಿಲುಮೆ ಕೇರಳದಲ್ಲಿ ಜಾತ್ಯಾತೀತ ಶಕ್ತಿಗಳಿಗೆ ಬಲಕೊಟ್ಟಿದೆ. ಪಂಜಾಬ್ ಅಸ್ಸಾಂನಲ್ಲಿ ಸಿ.ಪಿ.ಐ. (ಎಂ) ಪಾತ್ರ ಪ್ರತ್ಯೇಕತಾವಾದಿಗಳ ಮತೀಯ ಶಕ್ತಿಗಳ ಬಲ ಕುಂದಿಸುವಲ್ಲಿ ಸಹಾಯವಾಗಿದೆ. ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನ ಸಂಘಟನೆಗಳ ಹಾಗೆಯೇ ಎಡ ಪ್ರಜಾಪ್ರಭುತ್ವಶಕ್ತಿಗಳ ಕ್ರೋಢೀಕರಣ ಮಾತ್ರ ದೇಶವನ್ನು ಉಳಿಸಬಹುದು. ಛಿದ್ರಕಾರಿಗಳನ್ನೂ, ಜಾತೀಯವಾದಿಗಳನ್ನೂ ನಾಶ ಮಾಡಬಹುದು. ಅದುವೇ ಪ್ರತಿಗಾಮಿಗಳನ್ನೂ, ಕಾಂಗ್ರೆಸ್ ಧೋರಣೆಗಳನ್ನೂ ಸೋಲಿಸಿ ದೇಶವನ್ನು ರಕ್ಷಿಸಬಹುದು, ಈ ಮಹಾ ಕಾರ್ಯ ಮಾಡಿ ತೋರಿಸುತ್ತೇವೆಂದು ಪಣ ತೊಡೋಣ.

ಎನ್. ಕೆ. ಉಪಾಧ್ಯಾಯ

ಉಚಿತ ಬೋಧನಾ ತರಗತಿಗಳ ಸಮಾರೋಪ ಸಮಾರಂಭಗಳು

ಬಳ್ಳಾರಿ

ಎಸ್. ಎಸ್. ಎಲ್. ಸಿ. ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಬೋಧನಾ ತರಗತಿಗಳನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ಬಳ್ಳಾರಿ ಘಟಕವು ಕಳೆದ ಮೂರು ತಿಂಗಳಿಂದ ನಡೆಸಿಕೊಂಡು ಬಂದಿದ್ದು ಅದರ ‘ಸಮಾರೋಪ ಸಮಾರಂಭ’ ವನ್ನು ತಾ 9-3-1986 ರಂದು ನಡೆಸಲಾಯಿತು.

ಮುಖ್ಯ ಅತಿಥಿಯಾಗಿ ಕಾಂ. ಎನ್. ಕೆ. ಉಪಾಧ್ಯಾಯರು ಆಗಮಿಸಿದ್ದು, ನಮ್ಮ ದೇಶದ ಶಿಕ್ಷಣ ಪರಿಸ್ಥಿತಿ ಬಗ್ಗೆ ಮಾತನಾಡುತ್ತಾ, ಅವರು ಇತ್ತೀಚಿಗೆ ಸಂದರ್ಶಿಸಿದ ಸೋವಿಯತ್ ರಶಿಯಾ ದೇಶದಲ್ಲಿ ಶಿಕ್ಷಣ ರಂಗದ ಬಗ್ಗೆ ತುಲನಾತ್ಮಕವಾಗಿ ವಿವರಿಸಿದರು. ಎಸ್. ಎಫ್. ಐ. ಸಂಘಟಿಸಿರುವ ಈ ತರಗತಿಗಳು ಶ್ಲಾಘನೀಯವೆಂದರು, ಶಿಕ್ಷಕರಿಗೆ ಅಭಿನಂದನೆ ಹೇಳಿದರು.

ಅತಿಥಿಯಾಗಿದ್ದ ಎಸ್.ಎಫ್.ಐನ ರಾಜ್ಯ ಉಪಾಧ್ಯಕ್ಷ ಗುರುಶಾಂತ್ ಮಾತನಾಡಿ ಶಿಕ್ಷಣ ರಂಗದ ಸಮಸ್ಯೆಗಳನ್ನೂ ಗುರುತಿಸುತ್ತ ಒಳ್ಳೆಯ ಸೌಲಭ್ಯಗಳಿಗಾಗಿ, ಎಲ್ಲರಿಗೂ ಉಚಿತ ಶಿಕ್ಷಣಕ್ಕಾಗಿ ಹೋರಾಟ ನಡೆಸುವುದು ಅನಿವಾರ್ಯ. ಇದು ಅಭ್ಯಾಸದ ಒಂದು ಭಾಗ, ಉಚಿತ ಬೋಧನ ತರಗತಿಗಳು ಹೋರಾಟದ ಭಾಗವೂ ಆಗಿದೆ ಎಂದರು.

ಸಮಾರಂಭದಲ್ಲಿ ಶಿಕ್ಷಕರುಗಳು ತಮ್ಮ ಸಲಹೆ ಅಭಿಪ್ರಾಯಗಳನ್ನು ನೀಡಿ ತುಂಬಾ ಮೆಚ್ಚಿಗೆ ವ್ಯಕ್ತಪಡಿಸಿದರಲ್ಲದೇ ತಮ್ಮಿಂದ ಇಂತಹ ಕಾರ್ಯಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಜಿಲ್ಲಾ ಸಮಿತಿ ಅಧ್ಯಕ್ಷ ಪ್ರಸನ್ನ ಕುಮಾರ್ ಮಾತನಾಡಿ ಶಿಕ್ಷಕರ, ವಿದ್ಯಾರ್ಥಿ ಪಾಲಕರ ಸಹಕಾರ ಬಗ್ಗೆ ತಿಳಿಸಿದರು. ರಾಮಣ್ಣನವರಿಂದ ಸ್ವಾಗತ. ಯು. ಪಣ್ಯಾಕಪ್ಪ ವಂದನಾರ್ಪಣೆ, ಕೊನೆಗೆ ವಿದ್ಯಾರ್ಥಿಗಳಿಂದ ಮನೋರಂಜನಾ ಕಾರ್ಯಕ್ರಮಗಳು ಇದ್ದವು.

ಹೊಸಪೇಟೆ

ತಾ 10-3-1986 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ ವತಿಯಿಂದ ಹತ್ತನೆಯ ತರಗತಿಯ ಉಚಿತ ಬೋಧನಾ ತರಗತಿಗಳ ಸಮಾರೋಪ ಸಮಾರಂಭ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವೈ ಎಸ್. ಪಿ. ಗೋಪಾಲ್ ಹೊಸೂರ್ ಇವರು ಮಾತನಾಡುತ್ತಾ, ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸುತ್ತಲೇ ಅಭ್ಯಾಸದತ್ತ ನೀವು ಗಮನ ನೀಡಬೇಕೆಂದು ಹೇಳಿ–ಎಸ್. ಎಫ್. ಐ ಸಂಘಟಿಸಿರುವ ಈ ತರಗತಿಗಳು ಶ್ಲಾಘನೀಯವೆಂದರು.

ಅತಿಥಿಗಳಾಗಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎನ್. ಕೆ. ಉಪಾಧ್ಯಾಯರು “ಯಾವ ಆಶಯಗಳೊಂದಿಗೆ ತರಗತಿಗಳನ್ನು ಬಹಿಷ್ಕರಿಸಿ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟ ನಡೆಸಿದೆವೋ ಆ ಆಶಯಗಳು 38 ವರ್ಷಗಳ ಸ್ವಾತಂತ್ರ್ಯ ನಂತರದಲ್ಲಿ ಈಡೇರಲಿಲ್ಲ. ಬದಲಾಗಿ ಬಡತನ, ದಾರಿದ್ರ್ಯ, ಅನಕ್ಷರತೆ ಹೆಚ್ಚಾಗಿದೆ ಎಂದು ವ್ಯಥಿಸಿದರು. 1917 ರ ಅಕ್ಟೋಬರ್ ಕ್ರಾಂತಿ ನಂತರದಲ್ಲಿ ಸೋವಿಯತ್ ಸರಕಾರದ ಪ್ರಗತಿ ಶೈಕ್ಷಣಿಕ ರಂಗದ ಬದಲಾವಣೆಗಳನ್ನು ತಿಳಿಸಿ ಇಂದಿನ ಭಾರತದ ವ್ಯವಸ್ಥೆ ಸಂಪೂರ್ಣ ಬದಲಾಗದೇ ಸಮಸ್ಯೆಗಳು ಪರಿಹಾರವಾಗಲು ಸಾಧ್ಯವಿಲ್ಲ ಸಮಾಜವಾದೀ ವ್ಯವಸ್ಥೆಯೊಂದೇ ಪರಿಹಾರವೆಂದರು ಈ ತರಗತಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು

“ಇಂದಿನ ಪಠ್ಯ ಕ್ರಮದ ಹೊರೆ, ಅವೈಜ್ಞಾನಿಕ ಪರೀಕ್ಷಾ ಪದ್ಧತಿ, ಅವೈಜ್ಞಾನಿಕ ಶಿಕ್ಷಣ ನೀತಿಯ ಪರಿಣಾಮವಾಗಿ ಪರೀಕ್ಷೆಗಳಲ್ಲಿ ನಕಲಿನ ಹಾವಳಿ ಹೆಚ್ಚಾಗುತ್ತಿದೆ. ಗೂಂಡಾಗಿರಿ, ಅಕ್ರಮ, ಅವ್ಯವಹಾರಗಳ ಆಗರಗಳಾಗಿ ಪರೀಕ್ಷಾ ಫಲಿತಾಂಶದ ಕೇಂದ್ರಗಳು ಪರಿವರ್ತಿತವಾಗುತ್ತವೆ. ಇವುಗಳ ವಿರುದ್ಧ ಹೋರಾಡುವಲ್ಲಿ ಉಚಿತ ಬೋಧನಾ ತರಗತಿಗಳು ಒಂದು ಕಾರ್ಯಕ್ರಮ. ಉಚಿತ ಬೋಧನಾ ತರಗತಿಗಳು ಅಭ್ಯಾಸ ಮತ್ತು ಹೋರಾಟದ ಪ್ರತೀಕವೆಂದು ಕಾ|| ಗುರುಶಾಂತ್ ವಿವರಿಸಿದರು.

ಸಭೆಯ ಅಧ್ಯಕ್ಷತೆಯನ್ನು ನಗರ ಸಭೆ ಅಧ್ಯಕ್ಷರಾದ ಶ್ರೀ ಬ್ಯಾಲಾಳ್ ಪಂಪಾಪತಿ ವಹಿಸಿದ್ದರು.

ಕೊನೆಯಲ್ಲಿ ವಿದ್ಯಾರ್ಥಿಗಳಿಂದ ಬರಗಾಲದ ಬಗ್ಗೆ ನೃತ್ಯರೂಪಕ ಹಾಡು, ಕುಣಿತ ಮನೋರಂಜನಾ ಕಾರ್ಯಕ್ರಮಗಳು ನಡೆದವು.

ಅತ್ಯಂತ ಯಶಸ್ವಿಯಾಗಿ ಸಂಘಟಿಸಿದ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಬಳ್ಳಾರಿ, ಕೋರಣಗಲ್ಲು, ಹೊಸಪೇಟೆ ಮತ್ತು ಹರಪನಹಳ್ಳಿ ಘಟಕಗಳಿಗೆ ಎಸ್.ಎಫ್.ಐ. ಬಳ್ಳಾರಿ ಜಿಲ್ಲಾ ಸಮಿತಿಯು ಅಭಿನಂದನೆಗಳನ್ನು ತಿಳಿಸುತ್ತದೆ.

ತಿದ್ದುಪಡಿ

ಮುಖಪುಟದ “ನಿರುಪಯುಕ್ತ ವಿಧಾನಸಭೆ ಸಮಾವೇಶ” ಲೇಖನದ 5ನೇಯ ಪ್ಯಾರಾದ ಕೊನೆಯ ವಾಕ್ಯದಲ್ಲಿ “ವಿಷಯ ತಿಳಿದವರಾರೂ ಇಲ್ಲ” ಎಂದು ತಪ್ಪಾಗಿ ಪ್ರಿಂಟಾಗಿದೆ. ಅದನ್ನು “ತಿಳಿಯದವರಾರೂ ಇಲ್ಲ” ಎಂದು ಓದಿಕೊಳ್ಳಬೇಕು.

ತಿದ್ದುಪಡಿ

ಐಕ್ಯರಂಗ ನಿಧಿ ಸಂಗ್ರಹ

ಮಾರ್ಚ್ 16ರ ಐಕ್ಯರಂಗದಲ್ಲಿ ನಿಧಿ ಸಂಗ್ರಹದ ವರದಿ ತಪ್ಪಾಗಿ ಪ್ರಕಟವಾಗಿದೆ, ಈ ರೀತಿ ತಿದ್ದಿಕೊಳ್ಳಬೇಕಾಗಿ ವಿನಂತಿ.

ಹಿಂದಿನ ಮೊತ್ತ	13,125-00
ಅಂಟೋನಿ ವೆಲ್ಡಿಂಗ್ ವರ್ಕ್ಸ್	100-00
ಹಳೇಮನೆ	25-00
ಗೆಳೆಯರಿಂದ	100-00
ನಾಗರಾಜಮಠ	100-00
ಬಿ ಕೆ. ನಾಗರಾಜ	50-00
ಒಟ್ಟು	13,500-00

(1ನೇ ಪುಟದಿಂದ)

ಸಭೆಯಲ್ಲಿ ಮಂಡಿಸಲಿಲ್ಲ. ಪ್ರತಿ ದಿವಸ ಒಂದು ಕೋಟಿ ರೂ. ಖರ್ಚು ಮಾಡುತ್ತಿದ್ದೇವೆಂದು ಜಂಭ ಕೊಚ್ಚಿಕೊಳ್ಳುತ್ತಿರುವ ಜನತಾ ಮಂತ್ರಿಗಳು, ಆ ಹಣ ಎಲ್ಲಿ ಹೇಗೆ ಖರ್ಚಾಗುತ್ತಿದೆಂಬುದನ್ನು ಸದನದಲ್ಲಿ ವಿವರಿಸಲಿಲ್ಲ, ಒಂದು ಕೋಟಿ ಅಸಂಘಟಿತ ಕಾರ್ಮಿಕರಿಗೆ ಸಂಬಂಧಪಟ್ಟ ಕನಿಷ್ಟ ವೇತನ, ತುಟ್ಟಿಭತ್ತೆಗಳ ಕುರಿತು, ಕಾರ್ಮಿಕರ, ಅತಿ ದೊಡ್ಡ ಮತ ಪ್ರದರ್ಶನ ವಿಧಾನ ಸೌಧದೆದುರು ನಡೆದರೂ ಕೂಡ ಶಾಸಕರು ಆ ಸಮಸ್ಯೆಯ ಪರಿಹಾರಕ್ಕೆ ಗಮನ ಹರಿಸಿಲ್ಲ, ನಿವೇಶನ ರಹಿತರ, ನಗರ ಸಭೆ ನೌಕರದಾರರ, ಹಾಗೆಯೇ ಜನ ಸಾಮಾನ್ಯರ ಹಲವಾರು ಸಮಸ್ಯೆಗಳು ಚರ್ಚೆಗೂ ಬರಲಿಲ್ಲ, ಪರಿಹಾರವನ್ನೂ ಕಾಣಲಿಲ್ಲ.

ಆದ್ದರಿಂದ ಈ ವರ್ಷದ ಬಜೆಟ್ ಅಧಿವೇಶನ ಜನ ಸಾಮಾನ್ಯರ ಸಮಸ್ಯೆಗಳ ಕಡೆಗೆ ಗಮನ ಹರಿಸದೆ ವೈಯಕ್ತಿಕ ದ್ವೇಷಸಾಧನೆಯನ್ನು ಸಾಧಿಸಿಕೊಳ್ಳುವುದಕ್ಕೆ ಹೆಚ್ಚು ಶ್ರಮ–ಸಮಯ ವ್ಯಯಮಾಡಿರುವುದು ಶಾಸನ ಸಭೆಯ ಮೌಲ್ಯ ಎಷ್ಟು ಕೆಳಮಟ್ಟಕ್ಕಿಳಿಯುತ್ತಿದೆಂಬುದನ್ನು ತೋರಿಸಿ ಕೊಡುತ್ತದೆ. ಶಾಸಕರೂ, ಸಾರ್ವಜನಿಕರೂ ಇದರ ಕುರಿತು ಚಿಂತಿಸುವುದಗತ್ಯ.

Printed & Published by P. Ramachandra Rao on behalf of the Communist Party of India (Mrxist)KarnatakaState Committee,
K. V. Temple Street, Sultanpet, Bangalore-560053 Editorial and managerial office, L-56, K. V. TempleStreet, Sultanpet, B-53Phone : 75331
Editor P. Ramach andra Rao Managing Editor : N.K. Upadhyaya